## ನಗರಸಭಾ ಕಾರ್ಯಾಲಯ, ಮಂಡ್ಯ.

ಸಂಖ್ಯೆ:ನಸಮಂ/ಸಭೆ/21/2006-07. ದಿನಾಂಕ:28-11-2006.

### ಸಾಮಾನ್ಯ ಅಧಿವೇಶನದ ನಡವಳಿಕೆಗಳು

ದಿನಾಂಕ:28-11-2006ನೇ ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀ ಧರಣಪ್ಪ ಸಭಾಂಗಣದಲ್ಲಿ ದಿನಾಂಕ:16-11-2006ರ ಸಾಮಾನ್ಯ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದ್ದ ಸಭೆಯನ್ನು ಮಾನ್ಯ ನಗರಸಭಾ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ:28-11-2006ರ ನಗರಸಭಾ ಸಾಮಾನ್ಯ ಅಧಿವೇಶನದ ನಡವಳಿಕೆಗಳು.

**ಹಾಜರಿ:28+1 ಗೈರುಹಾಜರಿ:6+3 ಖಾಲಿ:1 ಒಟ್ಟು:35+4**

**ವಿಷಯ:1:-** ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:1:-** ದಿನಾಂಕ:18-7-2006ರ ತೀರ್ಮಾನ ಸಂಖ್ಯೆ:12ರ ತೀರ್ಮಾನದಲ್ಲಿ 31 ಎಂದಿರುವುದನ್ನು ವಾರ್ಡ್ ನಂಬರ್ 32 ಎಂಬುದಾಗಿ ತಿದ್ದುಪಡಿ ಮಾಡಿಕೊಂಡು ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡಲಾಯಿತು.

**ವಿಷಯ: 2:-** ದಿನಾಂಕ:29-8-2006 ರಂದು ನಡೆದ ಸ್ಥಾಯಿ ಸಮಿತಿ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:2:-** ದಿನಾಂಕ:29-8-2006ರ ಸ್ಥಾಯಿ ಸಮಿತಿ ಸಭೆ ನಡವಳಿಕೆ ತೀರ್ಮಾನ ಸಂಖ್ಯೆ:1ರಲ್ಲಿ ಖಾತಾ ನಂಬರ್:ಡಿ7/2370/5046 ಶ್ರೀ.ವೆಂಕಟರಮಣಾಚಾರ್ ಮತ್ತು ಡಿ7/2746/6073 ಶ್ರೀ. ನರಸಿಂಹೇಗೌಡ ಎಂಬುದಾಗಿ ತಿದ್ದುಪಡಿ ಮಾಡಿಕೊಂಡು ಸ್ಥಾಯಿ ಸಮಿತಿ ಸಭೆ ನಡವಳಿಕೆಗಳನ್ನು ಓಡಿ ರೆಕಾರ್ಡು ಮಾಡಲಾಯಿತು.

ಸದಸ್ಯರಾದ ಶ್ರೀ.ಹೆಚ್.ಕೆ.ರುದ್ರಪ್ಪರವರು ಮಾತನಾಡುತ್ತಾ ಸ್ಥಾಯಿ ಸಮಿತಿ ತೀರ್ಮಾನ ಸಂಖ್ಯೆ: 5 ರಂತೆ ಪೆಟ್ಟಿಗೆ ಅಂಗಡಿ ಇಡಲು ನೆಲ ಬಾಡಿಗೆ ಆಧಾರದ ಮೇಲೆ 10*10ಅಡಿ ಜಾಗವನ್ನು ಬಾಡಿಗೆಗೆ ನೀಡುವ ಬಗ್ಗೆ ತಮ್ಮ ವಿರೋಧ ವ್ಯಕ್ತಪಡಿಸಿದರು.

ಸದಸ್ಯರುಗಳಾದ ಶ್ರೀ.ಎಂ.ಮಹದೇವು(ಕಿಟ್ಟಿ)ರವರು ಮತ್ತು ಶ್ರೀ.ಎಂ.ಸಿ.ಮಹಾಲಿಂಗುರವರು ಕೊಡ ಬಹುದು ಎಂಬುದಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಲ್ಲಿ ಕೆಲವರು ನಗರಸಭಾ ವ್ಯಾಪ್ತಿಯಲ್ಲಿ ಹಲವು ಬಡ ಕುಟುಂಬಗಳಿದ್ದು, ಅವರುಗಳಿಗೂ 11 ತಿಂಗಳ ಅವಧಿಗೆ ನಗರಸಭೆ ಜಾಗಗಳಲ್ಲಿ ನೆಲ ಬಾಡಿಗೆ ಆಧಾರದ ಮೇಲೆ ಮಂಜೂರು ಮಾಡಿಕೊಡುವಂತೆ ಒತ್ತಾಯಿಸಿದ ಮೇರೆಗೆ ಸಭೆಯಲ್ಲಿ ಬಾಡಿಗೆ ಆಧಾರದ ಮೇಲೆ ನಿವೇಶನವನ್ನು ಕೋರಿ ಕೆಲವು ಅರ್ಜಿಗಳನ್ನು ಸಲ್ಲಿಸಿದ್ದು ನಗರ ಸೌಂದರ್ಯವನ್ನು ಕಾಪಾಡುವ ಹಿತದೃಷ್ಟಿಯಿಂದ ಸದರಿ ವಿಷಯವನ್ನು ಮುಂದೂಡಲಾಯಿತು.

**ವಿಷಯ:3:–** ಸರ್ಕಾರದಿಂದ ಬಂದಿರುವ ಅದೇಶ ಹಾಗೂ ಸುತ್ತೋಲೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

(1) ಸರ್ಕಾರದ ಆದೇಶ ಸಂಖ್ಯೆ: ನಅಇ/35/ಎಸ್.ಎಫ್.ಸಿ./2006 (5) ಬೆಂಗಳೂರು, ದಿನಾಂಕ: 19–9–2006 (ವಿಶೇಷ ಅನುದಾನ) ರೂ.1.00 ಕೋಟಿ.

(2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/155/ಆರ್‌ಆರ್‌ಸಿ/2006, ಬೆಂಗಳೂರು ದಿನಾಂಕ: 03–10–2006 (12ನೇ ಹಣಕಾಸು ಯೋಜನೆ ಅನುದಾನ) ರೂ.54.00 ಲಕ್ಷ

(3) ಸರ್ಕಾರದ ಆದೇಶ ಸಂಖ್ಯೆ:ನಅಇ/91/ಎಸ್‌ಎಫ್‌ಸಿ/2005, ಬೆಂಗಳೂರು ದಿನಾಂಕ:3–11–2006 .(12ನೇ ಹಣಕಾಸು ಯೋಜನೆ ಅನುದಾನ) ರೂ. 28.84 ಲಕ್ಷ

(4) ಸರ್ಕಾರದ ಆದೇಶ ಸಂಖ್ಯೆ:ನಅಇ/28/ಎಸ್ ಎಫ್‌ಸಿ/2006 , ಬೆಂಗಳೂರು , ದಿನಾಂಕ:4–11–2006. (ಮುಕ್ತ ಅನುದಾನ) ರೂ.44.33 ಲಕ್ಷಗಳು

**ತೀರ್ಮಾನ:3:–** ಸರ್ಕಾರದ ಆದೇಶಗಳನ್ನು ಓದಿ ರೆಕಾರ್ಡು ಮಾಡಲಾಯಿತು. ವಿಷಯ:(3)ರ ಕ್ರಮ ಸಂಖ್ಯೆ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶ ಸಂಖ್ಯೆ: ನಅಇ/35/ಎಸ್.ಎಫ್.ಸಿ./2006(5) ಬೆಂಗಳೂರು, ದಿನಾಂಕ: 19–9–2006ರಂತೆ ಮಂಡ್ಯ ನಗರಸಭೆಗೆ ಬಿಡುಗಡೆಯಾಗಿರುವ 1.00 ಕೋಟಿ ರೂಪಾಯಿಗಳ ಎಸ್.ಎಫ್.ಸಿ. ಅನುದಾನದ ಸರ್ಕಾರದ ಸುತ್ತೋಲೆ ಬಂದಿದ್ದು, ಸಭೆ ವೇಳೆಯಲ್ಲಿ ಸುತ್ತೋಲೆಗಳನ್ನು ಓದಿ ರೆಕಾರ್ಡು ಮಾಡಲು ಈ ದಿನ ಸಭೆಗೆ ವಿಷಯ ತರಲಾಗಿದ್ದು ಸಭೆಯಲ್ಲಿ ಹಾಜರಿದ್ದ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಎಂ.ಡಿ.ರಮೇಶ್‌ರಾಜುರವರು ಮತ್ತು ಮಾನ್ಯ ಎಂ.ಸಿ.ಮಹಾಲಿಂಗುರವರು, ಮಹದೇವು (ಕಿಟ್ಟಿ)ರವರು , ಶ್ರೀಮತಿ.ಬಿ.ಆರ್. ಇಂದಿರಾರವರನ್ನೊಳಗೊಂಡಂತೆ ಇನ್ನು ಕೆಲವು ಸದಸ್ಯರುಗಳು ಅವರುಗಳ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ನಂತರ ಮಾನ್ಯ ವಿಧಾನ ಪರಿಷತ್ ಸದಸ್ಯರ ಅಭಿಪ್ರಾಯದಂತೆ ಸದರಿ ಸುತ್ತೋಲೆಯಲ್ಲಿ ಬಿಡುಗಡೆಯಾಗಿರುವ 1.00ಕೋಟಿ ರೂಪಾಯಿಗಳನ್ನು ವಿನಿಯೋಗಿಸುವ ಬಗ್ಗೆ ಸುತ್ತೋಲೆಯನ್ನು ಪ್ರತ್ಯೇಕ ವಿಷಯವೆಂಬುದಾಗಿ ಮಾರ್ಪಾಡುಮಾಡಿ ತೆಗೆದುಕೊಂಡು 3ಜನ ಶಾಸಕರುಗಳನ್ನು ಒಳಗೊಂಡಂತೆ 35 ವಾರ್ಡ್‌ಗಳ ಸದಸ್ಯರುಗಳು ಸೇರಿದಂತೆ ಬಿಡುಗಡೆಯಾಗಿರುವ ಹಣವನ್ನು ಅಭಿವೃದ್ಧಿ ಕಾಮಗಾರಿಗಾಗಿ ವಿನಿಯೋಗಿಸುವಂತೆ ತೀರ್ಮಾನಿಸಲಾಯಿತು.

ಸದಸ್ಯರಾದ ಶ್ರೀ.ಹೆಚ್.ಕೆ.ರುದ್ರಪ್ಪರವರು ಈ ತೀರ್ಮಾನದ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿ, ಮಾನ್ಯ ಶಾಸಕರು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡು ವಿಶೇಷ ಅನುದಾನವನ್ನು ಬಿಡುಗಡೆ ಮಾಡಿಸಲಾಗಿದ್ದು ಸದರಿ ಮೊತ್ತದಲ್ಲಿ 50.00 ಲಕ್ಷ ರೂಪಾಯಿಗಳನ್ನು ವಾರ್ಡ್ ನಂಬರ್:22ರ ಅಭಿವೃದ್ಧಿ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿಸಿಕೊಂಡು ಬಂದಿರುತ್ತೇನೆ. ಆದ್ದರಿಂದ 50.00 ಲಕ್ಷ ರೂಪಾಯಿಗಳನ್ನು ನನ್ನ ವಾರ್ಡ್ ಅಭಿವೃದ್ಧಿ ಕಾಮಗಾರಿಗೆ ನೀಡಿ ಉಳಿದ ಹಣವನ್ನು ನಗರದ ಇನ್ನುಳಿದ ವಾರ್ಡ್‌ಗಳ ಅಭಿವೃದ್ಧಿ ಕಾಮಗಾರಿಗಳಿಗೆ ವಿನಿಯೋಗಿಸುವಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ.ಬಿ.ಎಂ.ಬಾಷರವರು ಮಾತನಾಡಿ ಮಾನ್ಯ ಶಾಸಕರುಗಳೊಂದಿಗೆ ಸಮಾಲೋಚಿಸಿ ತೀರ್ಮಾನಿಸುವಂತೆ ಸಲಹೆ ನೀಡಿದರು.

ಕ್ರಮ ಸಂಖ್ಯೆ(2) ಮತ್ತು (3) ಸರ್ಕಾರದ ಆದೇಶದಂತೆ ಬಿಡುಗಡೆಯಾಗಿರುವ ಅನುದಾನದ

ಮೊತ್ತವನ್ನು ನಗರಸಭೆಯ 35 ವಾರ್ಡ್‌ಗಳಲ್ಲಿ ಅಭಿವೃದ್ದಿ ಕಾಮಗಾರಿಗಳಿಗಾಗಿ ಪ್ರತೀ 2.00ಲಕ್ಷ ರೂ.ಗಳನ್ನು ಹಂಚಿಕೆ ಮಾಡಿ ವಿನಿಯೋಗಿಸುವುದೆಂದು ತೀರ್ಮಾನಿಸಲಾಯಿತು.

ಕ್ರಮ ಸಂಖ್ಯೆ(4)ರ ಸರ್ಕಾರದ ಆದೇಶದಂತೆ ಬಿಡುಗಡೆಯಾಗಿರುವ ಎಸ್.ಎಫ್.ಸಿ. ಮುಕ್ತ ಅನುದಾನದ ಮೊಬಗನ್ನು ವಿನಿಯೋಗಿಸುವ ಬಗ್ಗೆ ಚರ್ಚಿಸಲಾಗಿ , ಸದಸ್ಯರಾದ ಶ್ರೀ.ಎಂ.ಸಿ.ಮಹಾಲಿಂಗುರವರು ಬೀದಿ ದೀಪ ಅಳವಡಿಸಲು ಉಪಯೋಗಿಸುವಂತೆ ಸಲಹೆ ನೀಡಿದ್ದರ ಮೇರೆಗೆ ಹೊಸದಾಗಿ ಮೆಟಲ್ ಅಲಾಯ್ಡ್ ಬೀದಿ ದೀಪಗಳನ್ನು ಅಳವಡಿಸಲು ವಿನಿಯೋಗಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು. ( ಈ ಹಿಂದೆ ಸಾಮಾನ್ಯ ಸಭೆ ದಿನಾಂಕ: 7–6–2006 ವಿಷಯ ಸಂಖ್ಯೆ: 5ಎ ರಲ್ಲಿ ವಾರ್ಡ್‌ವಾರು ರೂ.2.00ಲಕ್ಷ ಗಳಿಗೆ ಕಾಮಗಾರಿ ಮಂಜೂರು ಮಾಡಲಾಗಿದ್ದು ಸಾಮಾನ್ಯ ಸಭೆ ದಿನಾಂಕ: 18–7–2006 ವಿಷಯ ಸಂಖ್ಯೆ: 12 ಕಾಮಗಾರಿ ಬದಲಾವಣೆ ಅಧಿಕಾರವನ್ನು ಅಧ್ಯಕ್ಷರು ಹಾಗೂ ಪೌರಾಯುಕ್ತರಿಗೆ ನೀಡಿದ್ದರ ಮೇರೆಗೆ ಹಲವು ಸದಸ್ಯರು ಕಾಮಗಾರಿ ಬದಲು ಮೆಟಲ್ ಅಲಾಯ್ಡ್ ಬೀದಿ ದೀಪಗಳನ್ನು ಅಳವಡಿಸಿಕೊಡುವಂತೆ ಕೋರಿ ಪತ್ರಗಳನ್ನು ಸಲ್ಲಿಸಿದ್ದು ಈಗಾಗಲೇ ಕೆಲವು ವಾರ್ಡ್‌ಗಳಿಗೆ ಮೆಟಲ್ ಅಲಾಯ್ಡ್ ಬೀದಿ ದೀಪಗಳನ್ನು ಅಳವಡಿಸಿದ್ದು, ಇನ್ನು ಕೆಲವು ವಾರ್ಡ್‌ಗಳಿಗೆ ಅಳವಡಿಸಬೇಕಾಗಿದ್ದು, ಮೇಲ್ಕಂಡ ಮುಕ್ತ ನಿಧಿ ಮೊಬಲಗನ್ನು ಮೆಟಲ್ ಅಲಾಯ್ಡ್ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಗೆ ವಿನಿಯೋಗಿಸಿಕೊಳ್ಳುವಂತೆ ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

ಅಂತಿವಾಗಿ ಮಾನ್ಯ ನಗರಸಭಾಧ್ಯಕ್ಷರು ಮಾತನಾಡಿ, ಮೇಲ್ಕಂಡಂತೆ ಬಿಡುಗಡೆಯಾಗಿರುವ ಎಲ್ಲಾ ಅನುದಾನಗಳ ಮೊತ್ತ ಮತ್ತು ನಗರಸಭೆ ನಿಧಿಯಿಂದ ಹೊಂದಾಣಿ ಮಾಡಿಕೊಂಡು ಒಟ್ಟಾರೆ ಪ್ರತೀ ವಾರ್ಡ್‌ಗೆ ಎಸ್.ಎಫ್.ಸಿ.ಅನುದಾನದ ಬಾಬ್ತು ರೂ.3.00ಲಕ್ಷ, 12ನೇ ಹಣಕಾಸು ಯೋಜನೆಯಲ್ಲಿ ಬಿಡುಗಡೆಯಾಗಿರುವ ರೂ.83.77ಲಕ್ಷಗಳನ್ನೊಳಗೊಂಡಂತೆ ವಾರ್ಡ್‌ವಾರು ರೂ.4.00ಲಕ್ಷಗಳ ಕಾಮಗಾರಿಗಳನ್ನು ಕೈಗೊಳ್ಳುವಂತೆಯೂ ಹಾಗೂ ಕೊರತೆಯಾಗಿರುವ ಹಣವನ್ನು ನಗರಸಭಾ ನಿಧಿಯಿಂದ ಭರಿಸಿಕೊಂಡು ಪ್ರತೀ ವಾರ್ಡ್‌ಗೆ ಒಟ್ಟು ರೂ.7.00ಲಕ್ಷಗಳ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿಸಲು ಮಂಜೂರು ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು. ಸಭೆಯಲ್ಲಿ ಜರೂರಾಗಿ ಟೆಂಡರ್ ಪ್ರಕ್ರಿಯೆ ಕೈಗೊಂಡು ಜಿಲ್ಲಾಧಿಕಾರಿಗಳವರ ಮಂಜೂರಾತಿ ಪಡೆದು ಟೆಂಡರ್ ಅಂಗೀಕರಿಸಿ ಕೆಲಸ ನಿರ್ವಹಿಸಲು ನಗರಸಭೆ ಅಧ್ಯಕ್ಷರು ಮತ್ತು ಪೌರಾಯುಕ್ತರಿಗೆ ಅಧಿಕಾರ ನೀಡುವುದೆಂದು ಸಭೆಯು ಒಪ್ಪಿ ತೀರ್ಮಾನಿಸಲಾಯಿತು. ಹಾಗೂ ದಿನಾಂಕ:8–5–2006ರ ವಿಷಯ ಸಂಖ್ಯೆ:2 ಕ್ರಮ ಸಂಖ್ಯೆ:81ರ ಕೌನ್ಸಿಲ್ ನಲ್ಲಿ ತೀರ್ಮಾನವಾಗಿರುವ ಮೆಟಲ್ ಅಲಾಯ್ಡ್ ಬೀದಿ ದೀಪಗಳನ್ನು ಖರೀದಿಸಲು ಅಳವಡಿಸಿಕೊಂಡಿರುವ ದರದ ರೀತ್ಯಾ ಅವಶ್ಯವಿರುವ ವಾರ್ಡ್‌ಗಳಿಗೆ ಮೆಟಲ್ ಅಲಾಯ್ಡ್ ಬೀದಿ ದೀಪಗಳನ್ನು ಖರೀದಿಸಿರುವುದನ್ನು ಒಪ್ಪಿ ಸದರಿ ದರದ ರೀತ್ಯಾ (ಎಸ್.ಆರ್. ನಲ್ಲಿ ದರ ಲಭ್ಯವಿಲ್ಲದ್ದರಿಂದ) ಬಿಲ್ ಮೊತ್ತವನ್ನು ಪಾವತಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:4:–** 2006ನೇ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಗಳ ಜಮ ಮತ್ತು ಖರ್ಚುಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:4:–** ನಗರಸಭೆ ಜಮಾ ಮತ್ತು ಖರ್ಚುಗಳನ್ನು ಓದಿ ರೆಕಾರ್ಡು ಮಾಡುವ ಸಂಬಂಧ ಚರ್ಚೆ ನಡೆದು ವಿ.ವಿ.ರಸ್ತೆಯಲ್ಲಿರುವ ನಗರಸಭೆ ಮಳಿಗೆಗಳ ಅವಧಿ ಮುಗಿದಿರುವ ಬಗ್ಗೆ ಕ್ರಮ ವಹಿಸುವಂತೆಯೂ ಹಾಗೂ ಸಂಬಂಧಪಟ್ಟ ಹಾಗು ಸಂಬಂಧಪಟ್ಟ ಶಾಖೆಯ ವಿಷಯ ನಿರ್ವಾಹಕರು ಸಮರ್ಪಕವಾಗಿ ಸದರಿ ಶಾಖೆಯಲ್ಲಿ ಕೆಲಸ ನಿರ್ವಹಿಸದೇ ತಪ್ಪು ಮಾಹಿತಿಗಳನ್ನು ನೀಡುತ್ತಿರುವುದರಿಂದ ಸದರಿ ನೌಕರರ ವಿರುದ್ಧ ಕ್ರಮ ವಹಿಸಿ ಅವರನ್ನು ಬೇರೆ ಶಾಖೆಗೆ ವರ್ಗಾಯಿಸಿ ಸದರಿ ಶಾಖೆಗೆ ಸಮರ್ಪಕವಾಗಿ ಕಾರ್ಯನಿರ್ವಹಿಸುವ ವಿಷಯ ನಿರ್ವಾಹಕರೊಬ್ಬರನ್ನು ನೇಮಿಸಲು ಸಭೆಯಲ್ಲಿ ಸೂಚಿಸುತ್ತಾ, 2006ನೇ ಜುಲೈ , ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಗಳ ಜಮೆ ಮತ್ತು ಖರ್ಚುಗಳನ್ನು ಒಪ್ಪಲಾಯಿತು.

**ವಿಷಯ:5:–** ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರ ಅರೆಸರ್ಕಾರಿ ಪತ್ರ ಸಂಖ್ಯೆ: ಕಜಮ/ಕಅ/ಮಂಡ್ಯ/ವಿಸ–1/ಕ.ಸಂ.36/ಬಸನ/1132/2006–07 ದಿನಾಂಕ:30–9–2006ರಂತೆ ಮಂಡ್ಯ ನಗರದ ನೀರು ಸರಬರಾಜು ನಿರ್ವಹಣೆಯ ವೆಚ್ಚವನ್ನು ತುಂಬಿಕೊಡುವ ಬಗ್ಗೆ ನಗರಸಭೆಯಿಂದ ಮಂಡಳಿಗೆ ಬರಬೇಕಾದ ಬಾಕಿ ಮೊತ್ತ ರೂ.478.50ಲಕ್ಷಗಳಾಗಿರುತ್ತದೆ. ನೀರಿನ ತೆರಿಗೆ ಮಾಹೆಯಾನ ರೂ.45/– ಗಳು ಮಾತ್ರವಿದ್ದು, ಸದರಿ ದರವನ್ನು ರೂ.100/–ಕ್ಕೆ ಹೆಚ್ಚಿಸಲು ನಗರಸಭೆಯಿಂದ ಅನುಮೋದನೆ ಕೋರಿರುವ ಬಗ್ಗೆ.

**ತೀರ್ಮಾನ:5:–** ವಿಷಯದ ಬಗ್ಗೆ ಸಭೆಯಲ್ಲಿ ಧೀರ್ಘವಾಗಿ ಚರ್ಚಿಸಲಾಯಿತು. ಸದಸ್ಯರಾದ ಶ್ರೀ.ಎಂ.ಸಿ. ಮಹಾಲಿಂಗುರವರು, ಶ್ರೀ.ಬಿ.ಎಂ.ಬಾಷರವರು, ಶ್ರೀ.ಎಂ. ಮಹದೇವು (ಕಿಟ್ಟಿ)ರವರು, ಶ್ರೀಮತಿ.ನಿರ್ಮಲ ಚಿಕ್ಕೇಗೌಡರವರು, ಶ್ರೀ.ಬಿ.ರಾಜಣ್ಣರವರು, ಶ್ರೀಮತಿ.ಬಿ.ಆರ್.ಇಂದಿರಾರವರು ಮತ್ತು ಶ್ರೀ.ಟಿ.ಶಂಕರ್ ರವರು ಮಾತನಾಡಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಒಂದೇ ನಲ್ಲಿ ಸಂಪರ್ಕವಿದ್ದರೂ ಎರಡು ಮತ್ತು ಮೂರು ಸಂಪರ್ಕವಿದೆ ಎಂದು ಪರಿಗಣಿಸಿ ಬಿಲ್‌ಗಳನ್ನು ನೀಡುತ್ತಿರುತ್ತಾರೆ. ಇದು ಸರಿಯಲ್ಲ. ಇರುವ ಒಂದು ನಲ್ಲಿಯಲ್ಲೇ ಸರಿಯಾಗಿ ನೀರು ಬರುವುದಿಲ್ಲ 2, 3 ನಲ್ಲಿಗಳು ಹೇಗೆ ಇರುತ್ತದೆ. ಆದ್ದರಿಂದ 2 , 3 ಸಂಪರ್ಕಗಳನ್ನು ದಾಖಲಿಸಿಕೊಂಡಿರುವುದನ್ನು ಮತ್ತು ಅವುಗಳ ಬಾಬ್ತು ನೀಡಿರುವ ಬಿಲ್‌ಗಳನ್ನು ಸಹ ಕಾನೂನು ರೀತ್ಯಾ ರದ್ದುಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ಹಾಗೂ ಅನಧಿಕೃತವಾಗಿ ಕೊಳಾಯಿ ಸಂಪರ್ಕಗಳನ್ನು ಪಡೆದುಕೊಂಡಿರುವುದನ್ನು ಸಕ್ರಮಗೊಳಿಸುವಂತೆಯೂ, 2 ,3 ಅನಧಿಕೃತ ಕೊಳಾಯಿ ಸಂಪರ್ಕಗಳನ್ನು ಮತ್ತು ರೇಸಿಂಗ್ ಮೈನ್‌ನಿಂದ ಕೊಳಾಯಿ ಸಂಪರ್ಕ ಪಡೆದುಕೊಂಡಿರುವುದನ್ನು ತೆಗೆಸಲು ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು.

ನಗರಸಭೆ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದೇ ಇರುವುದರಿಂದ ಹಾಗೂ ದಿನಾಂಕ: 1–6–2003 ರಿಂದ ನೀರಿನ ತೆರಿಗೆ ಬಾಕಿ ವಸೂಲಾತಿ ಮತ್ತು ಪ್ರತಿ ಮಾಹೆಯ ನೀರಿನ ತೆರಿಗೆಯನ್ನು ಸಹ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರೇ ವಸೂಲಾತಿ ಮಾಡುತ್ತಿರುವುದರಿಂದ ಸದರಿ 478.50ಲಕ್ಷ ರೂ.ಗಳನ್ನು ಮನ್ನಾ ಮಾಡುವಂತೆ ಸರ್ಕಾರವನ್ನು ಕೋರಿಕೊಳ್ಳುವುದೆಂದು ಮತ್ತು ಮಂಡ್ಯ ನಗರಕ್ಕೆ ಸಮರ್ಪಕವಾಗಿ ಸಂಪೂರ್ಣವಾಗಿ ಕೊರತೆ ಇಲ್ಲದಂತೆ ತೃಪ್ತಿಕರವಾಗಿ ನೀರು ಸರಬರಾಜು ವ್ಯವಸ್ಥೆ ಮಾಡಿದ ನಂತರ ಮತ್ತು ನಲ್ಲಿಗಳಿಗೆ ಮೀಟರ್ ಅಳವಡಿಸಿದ ನಂತರ ನೀರು ಸರಬರಾಜು ದರವನ್ನು ರೂ. 100/– ಗಳಿಗೆ ಹೆಚ್ಚಿಸಲು ಪರಿಶೀಲಿಸಿ ಮುಂದೆ ಕ್ರಮ ಕೈಗೊಳ್ಳುವುದೆಂದು, ಅಲ್ಲಿಯವರೆಗೂ ರೂ.45/–ಗಳಂತೆ ಇರುವ ನೀರು ಸರಬರಾಜು ದರವನ್ನೇ ಮುಂದುವರೆಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:6:–** 2006–07ನೇ ಸಾಲಿಗೆ ಶೇಕಡ 18ರ ಲೆಕ್ಕ ಶೀರ್ಷಿಕೆಯಡಿ ಕ್ರಿಯಾ ಯೋಜನೆಯನ್ನು ಮಂಜೂರು ಮಾಡುವ ಬಗ್ಗೆ.

**ತೀರ್ಮಾನ:6:–** ಈ ಕೆಳಕಂಡ ಕ್ರಿಯಾ ಯೋಜನೆಯನ್ನು ಒಪ್ಪಲಾಯಿತು.

1) **ಶೈಕ್ಷಣಿಕ ಕಾರ್ಯಕ್ರಮಗಳಿಗೆ ಶೇಕಡ 40% :–**

(1) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶಾಲೆಗಳಿಗೆ ಬೆಂಚು ಮತ್ತು ಡೆಸ್ಕ್ ವಿತರಿಸಲು ರೂ.6.00ಲಕ್ಷ

(2) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಮತ್ತು ವಿದ್ಯಾ ಸಂಸ್ಥೆಗೆ ಕಂಪ್ಯೂಟರ್ ನೀಡಲು ರೂ.3.00 ಲಕ್ಷ

(3) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ತರಬೇತಿ ನೀಡಲು (ಟೈಲರಿಂಗ್, ಫಿಟ್ಟರ್, ಎಲೆಕ್ಟ್ರಿಷಿಯನ್ ) ರೂ.2.00 ಲಕ್ಷ

(4) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಸ್ವಯಂ ಸೇವಾ ಸಂಸ್ಥೆಗಳಿಗೆ ಪೀಠೋಪಕರಣ ಗಳನ್ನು ನೀಡುವುದು. ರೂ.1.00 ಲಕ್ಷ

**2) ಆರ್ಥಿಕ ಪ್ರಗತಿ ಕಾರ್ಯಕ್ರಮಕ್ಕೆ ಶೇಕಡ 40%:–**

(1) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪತ್ರಿಕಾ ವರದಿಗಾರರಿಗೆ/ಸಂಪಾದಕರಿಗೆ ಲ್ಯಾಪ್‌ಟ್ಯಾಪ್ ಕಂಪ್ಯೂಟರ್ ನೀಡಲು ರೂ.4.00 ಲಕ್ಷ

(2) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ವಸಹಾಯ ಗುಂಪುಗಳಿಗೆ ಸಣ್ಣ ಉದ್ದಿಮೆ ಸ್ಥಾಪಿಸಲು ಸಹಾಯಧನ ರೂ.3.00 ಲಕ್ಷ

(3) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೊಲಿಗೆ ತರಬೇತಿ ಹೊಂದಿದ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಿಸಲು ರೂ.1.00 ಲಕ್ಷ

(4) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಂಗವಿಕಲರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಪ್ರೋತ್ಸಾಹ ವಂತಿಕೆ ರೂ.1.00 ಲಕ್ಷ

(5) ಅಂಬೇಡ್ಕರ್ ಸಮುದಾಯ ಭವನ ಹಾಗೂ ಅನುದಾನಿತ ವಿದ್ಯಾರ್ಥಿ ನಿಲಯಕ್ಕೆ ಪಾತ್ರೆಗಳು ಮತ್ತು ತಟ್ಟೆ ಲೋಟ ಕೊಳ್ಳಲು ರೂ.1.00 ಲಕ್ಷ

**3) ಇತರೆ ಶೇಕಡ:20%:–**

(1) ಮಂಡ್ಯ ನಗರ ವ್ಯಾಪ್ತಿಯಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಮತ್ತು ವಂತಿಕೆ ನೀಡಲು ರೂ.3.00 ಲಕ್ಷ

(2) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶೌಚಾಲಯ ರಹಿತ ಫಲಾನುಭವಿಗಳಿಗೆ ಶೌಚಾಲಯ ನಿರ್ಮಾಣಕ್ಕೆ. ರೂ.1.50 ಲಕ್ಷ

(3) ಅಂಬೇಡ್ಕರ್ ಭವನಗಳಿಗೆ ವಿದ್ಯುತ್ ಬಿಲ್ ಪಾವತಿ ರೂ.26,000/–

ಮೇಲ್ಕಂಡ ಕ್ರಿಯಾ ಯೋಜನೆಯನ್ನು ಒಪ್ಪಿ ಮಂಜೂರು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:7:–** ನಗರ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆ (ಯು.ಐ.ಡಿ.ಎಸ್.ಎಂ.ಟಿ.)ಯಲ್ಲಿ ಮಂಡ್ಯ ನಗರವನ್ನು ಸೇರ್ಪಡೆ ಮಾಡಿಕೊಳ್ಳುವ ಬಗ್ಗೆ.

**ತೀರ್ಮಾನ:7:–** ಮಂಡ್ಯ ನಗರ ವ್ಯಾಪ್ತಿಯಲ್ಲಿನ ನಾಗರೀಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅತ್ಯಾವಶ್ಯಕವಾಗಿ ಕೈಗೊಳ್ಳಬೇಕಾದ ಕಾಮಗಾರಿಗಳ ಯೋಜನಾ ವರದಿಯನ್ನು ಮಾನ್ಯ ನಿರ್ದೇಶಕರು ಸೂಚಿಸಿರುವ ಅನುಭವಿ ಕನ್ಸಲ್ಟೆಂಟ್ಸ್ ಮೂಲಕ ಕ್ರಿಯಾ ಯೋಜನೆ ತಯಾರಿಸಿ ಮಂಡ್ಯ ನಗರಸಭೆಯನ್ನು ನಗರ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆಯಡಿಯಲ್ಲಿ ಸೇರಿಸಿಕೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಿ ಮಂಜೂರಾತಿ ಪಡೆಯಲು ಒಪ್ಪಲಾಯಿತು. ಹಾಗೂ ಸಂಬಂಧಪಟ್ಟ ಕನ್ಸಲ್ಟೆನ್ಸಿ ಶುಲ್ಕವನ್ನು ನಗರಸಭಾ ನಿಧಿಯಿಂದ ಭರಿಸಲು ಒಪ್ಪಲಾಯಿತು.

**ವಿಷಯ:8:–** ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ನಗರಸಭೆಯಲ್ಲಿ ಒಂದು ಕೊಠಡಿ ಕೊಡಿಸಿಕೊಡುವುದರ ಬಗ್ಗೆ.

**ತೀರ್ಮಾನ:8:–** ನಗರದಲ್ಲಿನ ಕೊಳಚೆ ಪ್ರದೇಶದಲ್ಲಿನ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಮೈಸೂರು , ಬೆಂಗಳೂರಿನಲ್ಲಿರುವ ಕಛೇರಿಗಳಲ್ಲಿ ವ್ಯವಹರಿಸಬೇಕಾಗಿರುತ್ತದೆ. ಇದನ್ನು ತಪ್ಪಿಸಲು ನಮ್ಮ ನಗರದಲ್ಲಿಯೇ ಕೊಳಚೆ ನಿರ್ಮೂಲನಾ ಮಂಡಳಿ ಕಛೇರಿ ಇದ್ದರೆ ಅನುಕೂಲಕರವಾಗಿರುತ್ತದೆಂಬುದಾಗಿ ಪರಿಗಣಿಸಿ, ಮಂಡ್ಯ ನಗರಸಭೆ ಕಛೇರಿ ಆವರಣದಲ್ಲಿರುವ ಹಳೆಯ ಕಛೇರಿ ಕಟ್ಟಡದ ಪಕ್ಕದಲ್ಲಿರುವ ದಾಸ್ತಾನು ಕೊಠಡಿಗಳ ಪೈಕಿ ಒಂದು ಕೊಠಡಿಯನ್ನು ಲೋಕೋಪಯೋಗಿ ಇಲಾಖೆ ದರದಂತೆ ಬಾಡಿಗೆ ನಿಗಧಿಪಡಿಸಿ ಷರತ್ತುಗಳನ್ನು ವಿಧಿಸಿ ನೀಡಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:9:–** ಮಂಡ್ಯ ನಗರಸಭೆ ವ್ಯಾಪಿಯಲ್ಲಿ 19 ಸ್ಮಶಾನಗಳಿದ್ದು, ಈಗಾಗಲೇ 5 ಸ್ಮಶಾನಗಳನ್ನು ಅಭಿವೃದ್ಧಿಪಡಿಸಲು ಕೌನ್ಸಿಲ್ ಮಂಜೂರಾತಿ ನಿರೀಕ್ಷಣೆ ಮೇರೆಗೆ ಕ್ರಮ ಕೈಗೊಳ್ಳಲಾಗಿರುವುದನ್ನು ಒಪ್ಪುವ ವಿಚಾರ.

**ತೀರ್ಮಾನ:9:–** ಕೈಬಿಡಲಾಗಿರುವ ಸ್ಮಶಾನಗಳನ್ನು (ನಾಲಬಂದವಾಡಿ ಮುಸ್ಲಿಂ ಸ್ಮಶಾನ ಮತ್ತು ಯತ್ತಗದಹಳ್ಳಿ ಮುಸ್ಲಿಂ ಸ್ಮಶಾನ) ನಾಲಬಂದವಾಡಿ ಸ್ಮಶಾನದ ಸಂಬಂಧ ನ್ಯಾಯಾಲಾಯದಲ್ಲಿ ತಡೆಯಾಜ್ಞೆಯಿರುವುದರಿಂದ ತೆರವುಗೊಂಡನಂತರ ಅಭಿವೃದ್ಧಿಪಡಿಸಬಹುದೆಂದು ಮತ್ತು ಉಳಿಕೆ ಸ್ಮಶಾನಗಳನ್ನು ಅಭಿವೃದ್ಧಿಪಡಿಸಲು ಜರೂರು ಕ್ರಮ ಕೈಗೊಳ್ಳಲು ಮಾನ್ಯ ಅಧ್ಯಕ್ಷರಿಗೆ ಅಧಿಕಾರ ನೀಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಎಂ.ಡಿ.ರಮೇಶ್‌ರಾಜುರವರ ಕಲ್ಲಹಳ್ಳಿ ಸ್ಮಶಾನ ಅಭಿವೃದ್ಧಿಗೆ ಹೆಚ್ಚುವರಿಯಾಗಿ ರೂ.5.00ಲಕ್ಷಗಳನ್ನು ನೀಡುವಂತೆ ಸೂಚಿಸಿರುವ ಮೇರೆಗೆ ಸ್ಮಶಾನಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಒಪ್ಪಲಾಯಿತು.

**ವಿಷಯ:10:–** ಮಾನ್ಯ ಶ್ರೀಮತಿ.ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ, ಶಾಸಕರು, ಶ್ರೀರಂಗಪಟ್ಟಣ ಕ್ಷೇತ್ರ ರವರು ಮನವಿ ಸಲ್ಲಿಸಿ , ಶ್ರೀರಂಗಪಟ್ಟಣದಿಂದ ಮಂಡ್ಯ ನಗರಕ್ಕೆ ನೀರು ಸರಬರಾಜು ಕಲ್ಪಿಸಲಾಗಿದ್ದು, ಈ ಮಾರ್ಗದಲ್ಲಿ ಬರುವ 12 ಹಳ್ಳಿಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದರಿಂದ ಶ್ರೀರಂಗಪಟ್ಟಣದಿಂದ ಮಂಡ್ಯಕ್ಕೆ ನೀರು ಸರಬರಾಜಾಗುವ ಮುಖ್ಯ ಕೊಳವೆ ಮಾರ್ಗದಿಂದ ಪೈಪ್ ಲೈನ್ ನಿಂದ ನೀರಿನ ವ್ಯವಸ್ಥೆ ಮಾಡಲು ಕೋರಿರುತ್ತಾರೆ. ಸದರಿ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:10:–** ಮಂಡ್ಯ ನಗರದಲ್ಲಿಯೇ ನೀರಿನ ಕೊರತೆ ಹೆಚ್ಚಾಗಿರುವುದರಿಂದ, ನಗರಕ್ಕೆ ಸಂಪೂರ್ಣವಾಗಿ ಸಮರ್ಪಕವಾಗಿ ಮತ್ತು ತೃಪ್ತಿಕರವಾಗಿ ಯಾವುದೇ ಸಮಸ್ಯೆ ಇಲ್ಲದಂತೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಿದ ನಂತರ ಮುಂದೆ ವಿಷಯವನ್ನು ಸಭೆಗೆ ತಂದು ಪರಿಶೀಲಿಸಿ ಕ್ರಮ ಕೈಗೊಳ್ಳಬಹುದಾಗಿರುತ್ತದೆಯಾದ್ದರಿಂದ ಸಧ್ಯಕ್ಕೆ ವಿಷಯವನ್ನು ಕೈಬಿಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:11:–** ತಾಲ್ಲೋಕು 8ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ವಾಗತ ಸಮಿತಿ ಕಾರ್ಯದರ್ಶಿ, ಬಂದೀಗೌಡ ಬಡಾವಣೆ, ಮಂಡ್ಯರವರು ದಿನಾಂಕ:14–10–2006 ಮತ್ತು 15–10–2006ರಂದು ಎರಡು ದಿನಗಳ ಸಮ್ಮೇಳನ ನಡೆಸುತ್ತಿದ್ದು ಜಿಲ್ಲೆಯಾದ್ಯಂತ ಗಣ್ಯರು, ಸಾಹಿತಿಗಳು, ಅತಿಥಿಗಳು, ಪ್ರತಿನಿಧಿಗಳು ಸಾವಿರಾರು ಸಂಖ್ಯೆಯಲ್ಲಿ ಆಗಮಿಸುತ್ತಿದ್ದು ಕಾರ್ಯಕ್ರಮದ ವ್ಯವಸ್ಥೆಗಾಗಿ ಧನಸಹಾಯ ನೀಡುವಂತೆ ಕೋರಿರುತ್ತಾರೆ. ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:11:–** ಕಾರ್ಯಕ್ರಮ ಮುಗಿದಿರುವುದರಿಂದ ವಿಷಯವನ್ನು ಕೈಬಿಡುಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:12:–**ಮಂಡ್ಯ ನಗರದ ನೆಹರು ನಗರದಲ್ಲಿರುವ ಶ್ರೀ.ಶಂಕರ ಸೇವಾ ಪ್ರತಿಷ್ಠಾನ ಸಮಿತಿರವರು ಶ್ರೀ ಶಾರದಾ ಶರನ್ನವರಾತ್ರಿ ಉತ್ಸವಕ್ಕೆ ಧನಸಹಾಯ ಕೋರುತ್ತಾರೆ. ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:12:–** ವಿಷಯವನ್ನು ಕೈಬಿಡಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:13:–**ಮಾನ್ಯ ಜಿಲ್ಲಾಧಿಕಾರಿಗಳವರ ಪತ್ರದ ಸಂಖ್ಯೆ:ಸಿಎಇಲ್(1) 9/2006–07 ದಿನಾಂಕ:19–7–2006ರಂತೆ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ವಿಪತ್ತು ನಿರ್ವಹಣಾ ಕುರುತು ತುರ್ತು ನಿಗಾ ಘಟಕಗಳನ್ನು

ಪ್ರಕೃತಿ ವಿಕೋಪ ನಿಧಿಯಿಂದ ಸ್ಥಾಪಿಸಲು ಅನುಮೋದನೆ ನೀಡಿದ್ದು, ಇದಕ್ಕಾಗಿ 90.48ಚದರಮೀಟರ್ ಅಳತೆಯ ಸೂಕ್ತ ನಿವೇಶನವನ್ನು ಗುರ್ತಿಸಿ ಕೊಡಬೇಕೆಂದು ಕೋರಿರುವ ವಿಚಾರ.

**<u>ತೀರ್ಮಾನ:13</u>:–** ಶ್ರೀ.ಬಿ.ಎಂ.ಬಾಷರವರ ಸಲಹೆಯಂತೆ ಚೀರನಹಳ್ಳಿ ಲೇಔಟ್‌ನಲ್ಲಿರುವ ನಗರಸಭೆ ಜಾಗವನ್ನು ನೀಡಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ:14</u>**:–ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರ ಪತ್ರದ ಸಂಖ್ಯೆ:ಮುನಿಸಿ(1)82/2006–07 ದಿನಾಂಕ:6–11–2006ರಂತೆ ಮಂಡ್ಯ ನಗರದ ಪೂರ್ ಹಿಂದು ಬ್ಲಾಕ್ (ಗಾಂಧಿನಗರ ) ಅಸೆಸ್‌ಮೆಂಟ್ ನಂಬರ್: ಡಿ4/225/2370ರ ಸ್ವತ್ತಿಗೆ ಲಗತ್ತಾದ ಜಾಗ <u>17'+24'</u> *60' ಅಡಿ ;ಜಾಗವನ್ನು ನ್ಯಾಯಾಲಯದ

2

ಆದೇಶದಂತೆ ಶ್ರೀಮತಿ.ಆರ್.ಚಂದ್ರಕಲಾ ಕೋಂ.ಪುಟ್ಟಸ್ವಾಮಿರವರ ಹೆಸರಿಗೆ ಕಿಮ್ಮತ್ತು ನಿಗಧಿಪಡಿಸಿ ಕೌನ್ಸಿಲ್ ಅನುಮೋದನೆ ಪಡೆದು ಕಿಮ್ಮತ್ತು ಪಾವತಿಸಿಕೊಂಡು ಹಕ್ಕಪತ್ರ ನೀಡುವ ಬಗ್ಗೆ.

**<u>ತೀರ್ಮಾನ:14</u>:–** ಕಾನೂನು ಅನುಸರಿಸಿ ಕ್ರಮ ಕೈಗೊಳ್ಳಬಹುದೆಂದು ತೀರ್ಮಾನಿಸಲಾಯಿತು.

**<u>ವಿಷಯ:15</u>:–** ಮಂಡ್ಯ ತಾಲ್ಲೂಕು ಕಸಬಾ ಹೋಬಳಿ ಮಂಡ್ಯ ಗ್ರಾಮ ಸರ್ವೆ ನಂಬರ್:191/1ರಲ್ಲಿ 0–10 ಗುಂಟೆ ಈ ಹಿಂದೆಯೇ ಭೂಸ್ವಾಧೀನವಾಗಿರುತ್ತೆ ಹಾಗೂ ಸ್ಮಶಾನದ ರಸ್ತೆಗಾಗಿ 25'*177'ಅಡಿಯನ್ನು ಉಪಯೋಗಿಸಿಕೊಂಡಿದ್ದು ಸದರಿ ಸ್ವಾಧೀನಪಡಿಸಿಕೊಂಡಿರುವ ಜಾಗಕ್ಕೆ ಶ್ರೀ.ಬಿ.ಎಸ್. ಜಯಶಂಕರೇಗೌಡ, ಸುಭಾಷ್‌ನಗರ ಇವರು ಪರಿಹಾರವಾಗಿ ನಿವೇಶನವನ್ನು ಕೊಡಿಸಿಕೊಡುವಂತೆ ಕೋರಿರುವ ಬಗ್ಗೆ.

**<u>ತೀರ್ಮಾನ:15:–</u>** ಶ್ರೀ.ರವಿಶಂಕರೇಗೌಡರವರು ಪರಿಹಾರವಾಗಿ ಬೇರೆ ನಿವೇಶನ ನೀಡಲು ಕಾನೂನಿನಲ್ಲಿ ಅವಕಾಶವಿದ್ದಲ್ಲಿ ನೀಡುವಂತೆ ಸಲಹೆ ನೀಡಿದರು.

ಶ್ರೀಮತಿ. ನಿರ್ಮಲ ಚಿಕ್ಕೇಗೌಡರವರು ಕಾನೂನು ಅನುಸರಿಸಿ ಇಂದಿನ ಮಾರುಕಟ್ಟೆ ದರದಲ್ಲಿ ಪರಿಹಾರವನ್ನು ನೀಡಬಹುದೆಂದು ಸೂಚಿಸಿದರು. ಶ್ರೀ.ಟಿ.ಶಂಕರ್‌ರವರು ಅನುಮೋದಿಸಿದರು. ಸಭೆಯು ಒಪ್ಪಿ ತೀರ್ಮಾನಿಸಲಾಯಿತು.

**<u>ವಿಷಯ:16:–</u>** ಮಂಡ್ಯ ನಗರಸಭೆಯ ಐ.ಡಿ.ಎಸ್.ಎಂ.ಟಿ. ಮಳಿಗೆಗಳ ರಾತ್ರಿ ಕಾವಲು ಕೆಲಸಕ್ಕೆ ಸೆಕ್ಯೂರಿಟಿ ಗಾರ್ಡ್ ನೇಮಿಸಿದ್ದು ಸದರಿ ಮೊತ್ತವನ್ನು ಪಾವತಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳವರ ಪತ್ರದ ಸಂಖ್ಯೆ:ಮುನಿಸಿ(1) 73/2006–07 ದಿನಾಂಕ:22–9–2006ರಂತೆ ನಿಯಮಾನುಸಾರ ಪರಿಶೀಲಿಸಿ ನಗರಸಭಾ ನಿಧಿಯಿಂದ ಭರಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುವ ವಿಷಯದ ಬಗ್ಗೆ.

**<u>ತೀರ್ಮಾನ:16:–</u>** ಐ.ಡಿ.ಎಸ್.ಎಂ.ಟಿ.ಯೋಜನೆ ನಿಧಿಯಲ್ಲಿ ಸಾಕಷ್ಟು ಹಣವಿರುವುದರಿಂದ ಸದರಿ ನಿಧಿಯಿಂದ ಭರಿಸುವಂತೆ ಶ್ರೀ.ಹೆಚ್.ಕೆ.ರುದ್ರಪ್ಪರವರು ಸೂಚಿಸಿದರು. ಶ್ರೀ.ಎಂ.ಸಿ.ಮಹಾಲಿಂಗು ಮತ್ತು ಶ್ರೀ.ಎಂ.ಮಹದೇವು(ಕಿಟ್ಟಿ)ರವರು ಮಾತನಾಡಿ ನಗರಸಭೆ ಗಮನಕ್ಕೆ ತಾರದೇ ನೇರವಾಗಿ ಹಿಂದಿನ ಪೌರಾಯುಕ್ತರು ಕಾವಲುಗಾರರನ್ನು ನೇಮಿಸಿಕೊಂಡಿರುವುದರಿಂದ ನಗರಸಭೆ ವತಿಯಿಂದ ಭರಿಸಲು ಸಾಧ್ಯವಿಲ್ಲವೆಂದು ಹಾಗೂ ಐ.ಡಿ.ಎಸ್.ಎಂ.ಟಿ. ಸಮಿತಿಗೆ ಮಾನ್ಯ ಜಿಲ್ಲಾಧಿಕಾರಿಯವರೇ ಅಧ್ಯಕ್ಷರಾಗಿರುವುದರಿಂದ ಈ ಹಣ ಪಾವತಿಸಲು ಅವರ ನಿರ್ಣಯಕ್ಕೆ ಬಿಡುವುದೆಂದು ಅಭಿಪ್ರಾಯ ನೀಡಿದರು.

ಅಂತಿಮವಾಗಿ ಐ.ಡಿ.ಎಸ್.ಎಂ.ಟಿ.ಯೋಜನೆ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಯವರೇ ಈ ವಿಷಯದ ಬಗ್ಗೆ ಪುನರ್ ಪರಿಶೀಲಿಸಿ ಕ್ರಮ ಕೈಗೊಳ್ಳಲು ಪ್ರಸ್ತಾವನೆ ಸಲ್ಲಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:17:–** ಮಂಡ್ಯ ನಗರಸಭೆಗೆ ಸೇರಿದ ವಿವಿಧ ಬಡಾವಣೆಗಳಲ್ಲಿ 2327 ನಿವೇಶನಗಳು ಸರ್ಕಾರಿ ಮಂಜೂರಾತಿಯಾಗಿದ್ದು ವನಇ/132/ಎಂ.ಪಿ.ಸಿ/84 ದಿನಾಂಕ:17–1–1986ರಂತೆ ಅಲಾಟು ಆಗಿದ್ದು ಶ್ರೀಮತಿ.ಚಿನ್ನಮ್ಮ ಕೋಂ.ಲೇಟ್ ನಂಜಪ್ಪರವರಿಗೆ ಹಾಲಹಳ್ಳಿ ಕೆರೆ ಪಶ್ಚಿಮ ಭಾಗದ ಲೇಔಟ್‌ನಲ್ಲಿ 40/*25' ಅಡಿಗಳು ಮಂಜೂರಾಗಿದ್ದು ನಿಯಮಾನುಸಾರ ಕಿಮ್ಮತ್ತು ಹಣ ರೂ.837/–ಗಳನ್ನು ನಗರಸಭೆ ನಿಧಿಗೆ ದಿನಾಂಕ:4–1–1988ರಂತೆ ಪಾವತಿಸಿರುವ ಮೇರೆಗೆ , 1964ನೇ ಕರ್ನಾಟಕ ಪುರಸಭೆಗಳ ಕಾಯಿದೆ ನಿಯಮಾವಳಿ 72(7)ರಂತೆ ಹಕ್ಕು ಪತ್ರ ನೀಡಿದ್ದು ದಿನಾಂಕ:22–12–2000ರ ಕೌನ್ಸಿಲ್‌ನಲ್ಲಿ ಮೂಲ ದಾಖಲಾತಿ ಗಳನ್ನು ಹಾಜರ್ಪಡಿಸುವಂತೆ ತಿಳಿವಳಿಕೆ ನೀಡಿರುತ್ತದೆ ಎಂಬುದಾಗಿ ತಿಳಿಸಲಾಗಿತ್ತು. ಈಗ ಸದರಿಯವರು ಮೂಲ ದಾಖಲಾತಿಗಳನ್ನು ಹಾಜರ್ಪಡಿಸಿರುವುದರಿಂದ ಅಕ್ರಮ ಖಾತೆ ಎಂಬುದಾಗಿ ರದ್ದುಪಡಿಸಿರುವುದನ್ನು ಸದರಿ ಖಾತೆಯನ್ನು ಮುಂದುವರೆಸುವ ವಿಚಾರ.

**ತೀರ್ಮಾನ:17:–** ಕಾನೂನು ಅನುಸರಿಸಿ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು. ಹಾಗು ಇದೇ ರೀತಿ 2327 ನಿವೇಶನಗಳ ಪೈಕಿ ನಿಗಧಿತ ಸಮಯದಲ್ಲಿ ಕಿಮ್ಮತ್ತು ಪಾವತಿಸಿರುವಂತಹವರಿಗೆ ನೋಂದಾವಣಿ ಮಾಡಿಕೊಟ್ಟು ಹಕ್ಕುಪತ್ರ ನೀಡುವುದೆಂದು ಸಹ ತೀರ್ಮಾನಿಸಲಾಯಿತು.

**ವಿಷಯ:18:–** ಶ್ರೀ.ಎ.ನಾಗರಾಜಪ್ಪ, ಉಚ್ಛ ನ್ಯಾಯಾಲಯದ ವಕೀಲರು ಮತ್ತು ನಗರಸಭೆ ಕಾನೂನು ಸಲಹೆಗಾರರು ಬೆಂಗಳೂರುರವರ ವಕಾಲತ್ತು ಶುಲ್ಕ ರೂ.17,000/– ಗಳನ್ನು ಪಾವತಿಸುವ ಬಗ್ಗೆ.

**ತೀರ್ಮಾನ:18:–** ಕಾನೂನು ಅನುಸರಿಸಿ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ:19:**–ವಾರ್ಡ್ ನಂಬರ್:32ರ ನಗರಸಭಾ ಸದಸ್ಯರಾದ ಶ್ರೀ.ಎಂ.ಸಿ.ಮಹಾಲಿಂಗುರವರು ಸ್ವರ್ಣಸಂದ್ರ ಬಡಾವಣೆಯ ಸರ್ದಾರ್ ಸ್ವರ್ಣ ಸಿಂಗ್ ವೃತ್ತದ ಬಳಿ ಮಂಜೂರಾಗಿರುವ ಕಮಾನನ್ನು ಶ್ರೀ.ಕೆಂಪೇಗೌಡ ಮುಖ್ಯ ರಸ್ತೆಗೆ ಬದಲಾವಣೆ ಮಾಡಿಕೊಡುವಂತೆ ಕೋರಿರುವ ವಿಚಾರ.

**ತೀರ್ಮಾನ:19:–** ಮಾನ್ಯ ಸದಸ್ಯರಾದ ಶ್ರೀ.ಸುಬ್ರಹ್ಮಣ್ಯರವರನ್ನು ಹೊರತುಪಡಿಸಿ, ಸ್ಥಳ ಬದಲಾವಣೆ ಮಾಡಿಕೊಂಡು ಕಾಮಗಾರಿ ನಿರ್ವಹಿಸಬಹುದೆಂದು ತೀಮಾನಿಸಲಾಯಿತು.

**ವಿಷಯ:20:–** ಸ್ವರ್ಣಸಂದ್ರ ರಂಗ ಮಂದಿರಕ್ಕೆ 25,000/– ರೂ.ಗಳ ವೆಚ್ಚದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:20:–** ನಗರಸಭಾ ವ್ಯಾಪ್ತಿಗೆ ಬರುವ ಎಲ್ಲಾ ಕಾಮಗಾರಿಗಳನ್ನು ನಗರಸಭೆಯಿಂದ ಆಯಾ ವಾರ್ಡ್‌ಗಳಲ್ಲಿನ ಕಾಮಗಾರಿ ನಿರ್ವಹಣೆಗಾಗಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಮಾಡಿಸಿಕೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ:21:–** ಮಂಡ್ಯ ನಗರದ ಚಾಮುಂಡೇಶ್ವರಿ ನಗರದ ಶ್ರೀಮತಿ.ಹೆಚ್.ಬಿ.ಮಂಜುಳ ಕೋಂ. ಪುಟ್ಟಸ್ವಾಮಿರವರು ಖಾತಾ ನಂಬರ್:ಡಿ4/2098/4680/ಕೆಟಿ–9/ಎ ರ ಖಾತೆಯನ್ನು ದಿನಾಂಕ:30–4–2004ರ

ಕೌನ್ಸಿಲ್ ತೀರ್ಮಾಣದಂತೆ ರದ್ದುಪಡಿಸಲಾಗಿದ್ದು ಸದರಿ ಖಾತೆಯನ್ನು ತೆರವು ಮಾಡಿಸಿಕೊಡಬೇಕೆಂದು ಮಾನ್ಯ ನಗರಸಭಾ ಸದಸ್ಯರಾದ ಶ್ರೀ.ರವಿಶಂಕರೇಗೌಡರವರು ಮನವಿ ಸಲ್ಲಿಸಿರುವ ಬಗ್ಗೆ.

**ತೀರ್ಮಾನ:21:-** ಶ್ರೀ.ರವಿಶಂಕರೇಗೌಡ ಮತ್ತು ಶ್ರೀ.ಟಿ.ಶಂಕರ್‌ರವರ ಸೂಚನೆಯಂತೆ ಕಾನೂನು ಅನುಸರಿಸಿ ಅಭಿವೃದ್ಧಿ ಶುಲ್ಕ ಪಾವತಿಸದಿದ್ದಲ್ಲಿ ಅಭಿವೃದ್ಧಿ ಶುಲ್ಕವನ್ನು ಪಾವತಿಸಿಕೊಂಡು ಖಾತೆ ಮುಂದುವರೆಸಲು ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ:22:-** ನಸಮಂ/ಸಿ.ಆರ್/1/2005-06 ದಿನಾಂಕ:28-8-2006ರಂತೆ ಶೇಕಡ 18ರ ಯೋಜನೆಯಡಿಯಲ್ಲಿ ಟೆಂಡರ್ ಕರೆಯಲಾಗಿದ್ದು ಬಂದಿರುವ ಟೆಂಡರ್‌ನ ತುಲನಾತ್ಮಕ ಪಟ್ಟಿಯನ್ನು ಅಂಗೀಕರಿಸುವ ವಿಚಾರ.

**ತೀರ್ಮಾನ:22:-** ಅಂಗೀಕರಿಸಲಾಯಿತು.

**ವಿಷಯ:23:-**ಮಂಡ್ಯ ನಗರದ ಒಂದನೇ ವಾರ್ಡ್‌ನ ಪೇಟೆ ಬೀದಿ, ಮಸೀದಿ ರಸ್ತೆ, ನಾಲಬಂದವಾಡಿ 1ನೇ ಕ್ರಾಸ್ ಮತ್ತು ಕಾಳಿಕಾಂಬ ರಸ್ತೆ ಸೇರುವ ರಸ್ತೆಗಳ ವೃತ್ತಕ್ಕೆ ಜಬ್ಬಾರ್ ಸರ್ಕಲ್ ಎಂದು ಕಮಾನು (ಆರ್ಚ್) ನಾಮಫಲಕ ಹಾಕಲು ಸದರಿ ಪ್ರದೇಶದ ನಿವಾಸಿಗಳು ಮನವಿ ಸಲ್ಲಿಸಿರುವ ವಿಚಾರ .

**ತೀರ್ಮಾನ:23:-** ಒಪ್ಪಲಾಯಿತು. ಇದೇ ರೀತಿ ಕೆಲವು ವಾರ್ಡ್‌ನ ಸದಸ್ಯರುಗಳು ಆರ್ಚ್ ಹಾಕಲು ಕೋರಿರುವುದರಿಂದ ನಗರದ ಎಲ್ಲಾ ವಾರ್ಡ್‌ಗಳಿಗೂ ತಲಾ ಒಂದು ಆರ್ಚ್ ಮಾಡಿಸಬಹುದೆಂದು ಸರ್ವಾನುಮತದಿಂದ ಬಹುಮತದಿಂದ ಒಪ್ಪಲಾಯಿತು.

**ವಿಷಯ:24:-** ಮಂಡ್ಯ ನಗರದ ನಾಲಬಂದವಾಡಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಶಾಲೆಗೆ ಹೊಂದಿಕೊಂಡಿರುವ ಜಾಗ 2400 ಚದರಅಡಿ ಅಳತೆಯನ್ನು ಹಿರಿಯ ಪ್ರಾಥವಿಕ ಪಾಠ ಶಾಲೆಗೆ ಮಂಜೂರು ಮಾಡಿ ಕೊಡಲು ನಗರಸಭಾ ಸದಸ್ಯರಾದ ಶ್ರೀ.ಎಂ.ಮಹದೇವು (ಕಿಟ್ಟಿ)ರವರು ಕೋರಿರುವ ವಿಚಾರ.

**ತೀರ್ಮಾನ:24-** ಸರ್ಕಾರದ ಆದೇಶವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ:25:-** ಮಾನ್ಯ ನಗರಸಭಾ ಉಪಾಧ್ಯಕ್ಷರಾದ ಶ್ರೀಮತಿ ನಸ್ರೀನ್ ತಾಜ್‌ರವರು ವಾರ್ಡ್ ನಂಬರ್:4 ಆಜಾದ್‌ನಗರ ಮತ್ತು ಶಂಕರಪುರ ಬಡಾವಣೆಯಲ್ಲಿ ಒಳಚರಂಡಿ ಮ್ಯಾನ್‌ಹೋಲ್ ಚೇಂಬರ್‌ಗಳನ್ನು ದುರಸ್ತಿ ಮಾಡಿಸಲು ಮತ್ತು ಶಂಕರಪುರ 3ನೇ ಅಡ್ಡ ರಸ್ತೆ 2ನೇ ಕ್ರಾಸ್‌ನಲ್ಲಿ ಹಾಳಾಗಿರವ ಹಳೆಯ ಒಳಚರಂಡಿ ಪೈಪ್‌ಗಳನ್ನು ತೆಗೆಸಿ ಹೊಸದಾಗಿ ಒಳಚರಂಡಿ ಪೈಪ್ ಲೈನ್ ಹಾಕಿಸಿಕೊಡಲು ಕೋರಿರುವ ವಿಚಾರ.

**ತೀರ್ಮಾನ:25-** ಕಾಮಗಾರಿ ನಿರ್ವಹಣೆ ಮಂಜೂರಾತಿ ಅಧಿಕಾರವನ್ನು ಮಾನ್ಯ ಅಧ್ಯಕ್ಷರಿಗೆ ನೀಡಿರುವುದರಿಂದ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

**ವಿಷಯ:26:-** ಶ್ರೀ.ಎಂ.ಕೆ.ವೆಂಕಟೇಶ್, ಶ್ರೀನಿವಾಸ ದೇವಸ್ಥಾನ ಬೀದಿ, ಓಲ್ಡ್ ಟೌನ್, ಮಂಡ್ಯ ಇವರು ಮನವಿ ಸಲ್ಲಿಸಿ ಶ್ರೀನಿವಾಸ ದೇವಸ್ಥಾನದ ರಸ್ತೆಯ ಬಾಜುವಿನಲ್ಲಿ ನಗರಸಭೆ ಜಾಗ ಇರುವುದರಿಂದ 10'*12' ಅಡಿ ಜಾಗವನ್ನು ನೆಲ ಬಾಡಿಗೆ ಆಧಾರದ ಮೇಲೆ ಕೊಡಿಸಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:26:-** ವಿಷಯ ಸಂಖ್ಯೆ 2ರಲ್ಲಿ ನೆಲ ಬಾಡಿಗೆ ಆಧಾರದ ಮೇಲೆ ಸ್ಥಳಾವಕಾಶ ಕೋರಿರುವ ವಿಷಯ ಪ್ರಸ್ತಾಪವಾಗಿರುವುದರಿಂದ ಸದರಿ ತೀರ್ಮಾನದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:27:-** ಶ್ರೀ.ಎಂ.ಬಿ.ರಮೇಶ್, ವಿದ್ಯಾವಂತ ನಿರುದ್ಯೋಗಿ , ವಿದ್ಯಾನಗರ, ಮಂಡ್ಯ ಇವರು ಮನವಿ ಸಲ್ಲಿಸಿ ನಂದಾ ಟಾಕೀಸ್ ಎಡಭಾಗದ ವೃತ್ತದಲ್ಲಿ ಕಾಯೋಸ್ಕ್ ಇಡಲು 10'*10' ಅಡಿಗಳ ಜಾಗವನ್ನು ನೆಲ ಬಾಡಿಗೆ ಆದಾರದ ಮೇಲೆ ಕೊಡಿಸಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:27:** ವಿಷಯ ಸಂಖ್ಯೆ 2ರಲ್ಲಿ ನೆಲ ಬಾಡಿಗೆ ಆಧಾರದ ಮೇಲೆ ಸ್ಥಳಾವಕಾಶ ಕೋರಿರುವ ವಿಷಯ ಪ್ರಸ್ತಾಪವಾಗಿರುವುದರಿಂದ ಸದರಿ ತೀರ್ಮಾನದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:28:-** ನಗರಸಭಾ ಸದಸ್ಯರಾದ ಶ್ರೀ.ಎಂ.ಸಿ.ರಾಘವೇಂದ್ರರವರು ನಂದಾ ಟಾಕೀಸ್ ವೃತ್ತದ ಆಸ್ಪತ್ರೆ ಪಶ್ಚಿಮ ಭಾಗದ ರಸ್ತೆಗೆ ಅಂದಾಜು 60,000/- ರೂ.ಗಳ ವೆಚ್ಚದಲ್ಲಿ ಶ್ರೀ. ಎಸ್.ಡಿ. ಜಯರಾಂ ವೃತ್ತಕ್ಕೆ ಕಮಾನು (ಆರ್ಚ್) ಹಾಕಿಸಿಕೊಡುವಂತೆ ಮನವಿ ಸಲ್ಲಿಸಿರುವ ವಿಚಾರ.

**ತೀರ್ಮಾನ:28:-** ವಿಷಯ 23ರ ತೀರ್ಮಾನದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:29:-**ಶ್ರೀ.ಜಿ.ಪುಟ್ಟಸ್ವಾಮಿ ಬಿನ್ ಗೆಜ್ಜೇಗೌಡ ಮತ್ತು ಶ್ರೀ.ಎಂ.ಮಂಚೇಗೌಡ ಬಿನ್ ಮಹಲಿಂಗಯ್ಯ ರವರುಗಳು ಖಾತಾ ನಂಬರ್ ಡಿ4/3092/2/ಕೆಟಿ/398/3 ರ ಸ್ವತ್ತಿನ ವಿಚಾರದಲ್ಲಿ ಒಳಚರಂಡಿ ಕಾಮಗಾರಿ ಸ್ಥಗಿತಗೊಂಡಿದ್ದು, 50'*18'ಅಡಿ ಪ್ರದೇಶವನ್ನು ಶ್ರೀ.ಮಂಚೇಗೌಡರಿಗೆ ಪರಿಹಾರವಾಗಿ ನೀಡಿರುತ್ತೆ. ಬರಬಹುದಾದ ಪೂರ್ಣ ಪರಿಹಾರದ ಹಣವನ್ನು ಶ್ರೀ.ಪುಟ್ಟಸ್ವಾಮಿರವರಿಗೆ ನಗರಸಭೆಯಿಂದ ನೀಡುವುದರ ಬಗ್ಗೆ.

**ತೀರ್ಮಾನ:29:-** ಕಾನೂನು ಅನುಸರಿಸಿ ಕೊಡಬಹುದೆಂದು ಒಪ್ಪಲಾಯಿತು.

**ವಿಷಯ:30:-** ಶ್ರೀ.ಬಿ.ರಾಜಣ್ಣರವರು, ನಗರಸಭಾ ಸದಸ್ಯರು ಮನವಿ ಸಲ್ಲಿಸಿ ವಾರ್ಡ್ ನಂಬರ್:25 , ಬೋವಿ ಕಾಲೋನಿಯ ಹೆಸರನ್ನು 'ಶ್ರೀನಿವಾಸ ಬಡಾವಣೆ' ಎಂದು ಲೇಬರ್ ಕಾಲೋನಿಯ ಹೆಸರನ್ನು 'ಶ್ರೀ ರಾಮ ಬಡಾವಣೆ ' ಎಂದು ನಾಮಕರಣ ಮಾಡಿ ಈ ಎರಡು ಕಾಲೋನಿಗಳಿಗೆ ಕಮಾನು(ಆರ್ಚ್) ನಾಮಫಲಕಗಳನ್ನು ಹಾಕಿಸಿಕೊಡಲು ಕೋರಿರುವ ವಿಚಾರ.

**ತೀರ್ಮಾನ:30:-** " ಶ್ರೀನಿವಾಸ ಬಡಾವಣೆ ಮತ್ತು ಶ್ರೀ ರಾಮ ಬಡಾವಣೆ " ಎಂದು ನಾಮಕರಣ ಮಾಡುವ ಬಗ್ಗೆ ಕಾನೂನು ಅನುಸರಿಸಿ ಕ್ರಮ ಕೈಗೊಳ್ಳಬಹುದೆಂದು ಹಾಗೂ ಕಮಾನು (ಆರ್ಚ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿಷಯ 23ರ ತೀರ್ಮಾನದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:31:-** ನಗರಸಭಾ ಸದಸ್ಯರಾದ ಶ್ರೀಮತಿ.ನಿರ್ಮಲ ಚಿಕ್ಕೇಗೌಡರವರು ಮನವಿ ಸಲ್ಲಿಸಿ ವಾರ್ಡ್ ನಂಬರ್:33ರಿಂದ ಹರಿದು ಬರುವ ಒಳಚರಂಡಿ ಗಲೀಜು ನೀರು ವಾರ್ಡ್ ನಂಬರ್:34ರಲ್ಲಿರುವ ತೆರೆದ ಚರಂಡಿಗೆ ಸೇರದಂತೆ ಪರ್ಯಾಯ ವ್ಯವಸ್ಥೆ ಮಾಡಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:31:-** ಸ್ಥಳ ಪರಿಶೀಲಿಸಿ ಶೀಘ್ರವಾಗಿ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.

**ವಿಷಯ:32:-** ನಗರಸಭಾ ಸದಸ್ಯರಾದ ಶ್ರೀ.ಮುನಾವರ್ ಖಾನ್ರವರು ಮನವಿ ಸಲ್ಲಿಸಿ ಹಳೇ ಮುನೀರ್ ಹೋಟೆಲ್ ರಸ್ತೆಗೆ ಸ್ವತಂತ್ರ ಯೋಧ ಟಿಪ್ಪು ಸುಲ್ತಾನ್‌ರವರ ಹೆಸರನ್ನು ನಾಮಕರಣ ಮಾಡಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:32**:–ಕಾನೂನು ಅನುಸರಿಸಿ ಕ್ರಮ ಕೈಗೊಳ್ಳಬಹುದೆಂದು ತೀರ್ಮಾನಿಸಲಾಯಿತು.

**ಅಜೆಂಡಾದಲ್ಲಿ ವಿಷಯ ಕ್ರಮ ಸಂಖ್ಯೆ:33 ಎಂಬುದಕ್ಕೆ ಬದಲಾಗಿ 34 ಎಂದು ನಮೂದಾಗಿರುವುದನ್ನು ಸರಿಪಡಿಸಿಕೊಂಡು ಕ್ರಮ ಸಂಖ್ಯೆ ಮುಂದುವರೆಸಿರುತ್ತೆ.**

**ವಿಷಯ:33**:– ಮಂಡ್ಯ ನಗರ ವ್ಯಾಪ್ತಿಯಲ್ಲಿರುವ ವಿದ್ಯುತ್ ಕಂಬಗಳಲ್ಲಿ ಕಂಟ್ರೋಲ್ ವೈರ್ ಇಲ್ಲದ ಕಾರಣ ಬೀದಿ ದೀಪಗಳ ನಿಯಂತ್ರಣವಿಲ್ಲದೆ ವಿದ್ಯುಚ್ಛಕ್ತಿ ಪೋಲಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ಹಾಗೂ ವಿದ್ಯುಚ್ಛಕ್ತಿ ಕಂಪೆನಿಯವರಿಂದ ದೂರು ಇರುವುದರಿಂದ , ಈ ಬಗ್ಗೆ ಕ್ರಮ ಕೈಗೊಳ್ಳಲು ಇದಕ್ಕೆ ತಗಲುವ ವೆಚ್ಚವನ್ನು ನಗರಸಭೆಯಿಂದ ಭರಿಸಲು ಮತ್ತು ಈ ಕೆಳಕಂಡ ಸ್ಥಳಗಳಲ್ಲಿ ಟ್ಯೂಬಿಲಾರ್ ಪೋಲ್ಸ್ ಹಾಕಿ ಬೀದಿ ದೀಪಗಳನ್ನು ಅಳವಡಿಸಲು ತೀರ್ಮಾನಿಸುವ ಬಗ್ಗೆ.

(1) ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿರುವ ರೈಲ್ವೆ ಕೆಳ ಸೇತುವೆ ರಸ್ತೆಯಲ್ಲಿ ಹೆಕ್ಸಗೋನಲ್ ಪೋಲ್ (ಸಂಜಯ ಸರ್ಕಲ್‌ನಿಂದ ಹೊಳಲು ಸರ್ಕಲ್‌ವರೆಗೆ)
(2) ಮಂಡ್ಯ ನಗರದ ಕರ್ನಾಟಕ ಬಾರ್ ಸರ್ಕಲ್‌ನಿಂದ ಪಂಪ್‌ಹೌಸ್‌ವರೆಗೆ.

**ತೀರ್ಮಾನ:33**:– ಒಪ್ಪಲಾಯಿತು. ಇದೇ ರೀತಿ ಎಲ್ಲಾ ವಾರ್ಡ್‌ಗಳಲ್ಲಿಯೂ ಸೆಸ್ಕಾಂ ಅಧಿಕಾರಿಗಳೊಂದಿಗೆ ಜಂಟಿ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ 34:–** ಶ್ರೀ.ಲಕ್ಷ್ಮಣ ಬಿನ್ ಲೇಟ್.ಚನ್ನಬೋರಯ್ಯ ಅಂಗವಿಕಲರು ಇವರು ಶ್ರೀ ಗುಂಡೂರಾವ್ ಪಾರ್ಕ್ ಬಳಿ ಪಾದಚಾರಿ ರಸ್ತೆಯಲ್ಲಿ (ಫುಟ್‌ಪಾತ್) ತರಕಾರಿ ಅಂಗಡಿಯನ್ನು ಬಹಳ ವರ್ಷಗಳಿಂದ ಇಟ್ಟುಕೊಂಡಿರುತಾರೆ. ಆದ್ದರಿಂದ ಸದರಿ ಸ್ಥಳದಿಂದ ಅವರನ್ನು ತೆರವು ಮಾಡಿಸುವ ಬದಲು ಸದರಿಯವರ ಅಂಗಡಿ ಹತ್ತಿರದಲ್ಲೇ ಇರುವ ನಗರಸಭೆ ವಾಣಿಜ್ಯ ಮಳಿಗೆಗಳಲ್ಲಿ ಖಾಲಿ ಇರುವ ಒಂದು ಮಳಿಗೆಯನ್ನು ನೀಡುವ ವಿಚಾರ.

**ತೀರ್ಮಾನ:34:–** ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಿ ಸದರಿ ವಾಣಿಜ್ಯ ಸಂಕೀರ್ಣಗಳಲ್ಲಿರುವ ಇತರೆ ಮಳಿಗೆಗಳು ಹರಾಜು ಆಗಿರುವ ಬಾಡಿಗೆ ದರರಂತೆ ರೂ.550/– ಬಾಡಿಗೆ ನಿಗಧಿಪಡಿಸಿ, 25,500/– ರೂ.ಗಳು ಮುಂಗಡ ಹಣವನ್ನು ಪಾವತಿಸಿ ಮಳಿಗೆ ಪಡೆಯಲು ಸದರಿಯವರು ಸಿದ್ದರಿದ್ದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಮಂಜೂರು ಮಾಡಬಹುದೆಂದು, ತಪ್ಪಿದಲ್ಲಿ ತಕ್ಷಣ ತೆರವುಗೊಳಿಸಲು ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ 35**:– ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಕಛೇರಿಯ ಈ–ಮೇಲ್ ಪತ್ರದಂತೆ ಈ ನಗರಸಭೆಗೆ ಅಳವಡಿಸಿಕೊಂಡಿರುವ ಬ್ರಾಡ್ ಬ್ಯಾಂಡ್ ಇಂಟರ್‌ನೆಟ್‌ನ್ನು ಮೇಲ್ದರ್ಜೆಗೇರಿಸಿಕೊಳ್ಳಲು ಬಿ.ಎಸ್.ಎನ್.ಎಲ್ ರವರಿಗೆ ಮಾಹೆಯಾನ ರೂ. 5,000/– (ಐದು ಸಾವಿರ) (ಬಿ.ಎಸ್.ಎನ್.ಎಲ್ ಬಿಜಿನೆಸ್ 5000 ಪ್ಲಾನ್) ಪಾವತಿಸಲು ಅನುಮೋದಿಸುವ ಬಗ್ಗೆ.

**ತೀರ್ಮಾನ:35**:– ಒಪ್ಪಲಾಯಿತು.

**ವಿಷಯ:36:–** ಮಂಡ್ಯ ನಗರದ, ನೆಹರು ನಗರ 8ನೇ ಕ್ರಾಸ್‌ನಲ್ಲಿರುವ ಡಫೊಡಿಲ್ ನ್ಯಾಷನಲ್ ಸ್ಕೂಲ್‌ಗೆ ಹೋಗುವ ರಸ್ತೆಯು ಬಹಳಷ್ಟು ಹಾಳಾಗಿದ್ದು, ಕರ್ನಾಟಕ ರಾಜ್ಯದ ಸನ್ಮಾನ್ಯ ಉಪ ಮುಖ್ಯ ಮಂತ್ರಿಯವರು ಸದರಿ ಶಾಲಾ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸುವುದರಿಂದ ಸದರಿ ರಸ್ತೆಯನ್ನು ಅಂದಾಜು

1.00ಲಕ್ಷ ರೂ.ಗಳ ವೆಚ್ಚದಲ್ಲಿ ಅಭಿವೃದ್ದಿಪಡಿಸಿಕೊಡುವಂತೆ ನಗರಸಭಾ ಸದಸ್ಯರಾದ ಶ್ರೀ.ಎಂ.ಸಿ. ರಾಘವೇಂದ್ರ ರವರು ಕೋರಿರುವ ವಿಚಾರ.

**ತೀರ್ಮಾನ:36:–** ವಿಷಯ ಸಂಖ್ಯೆ:20ರ ನಿರ್ಣಯದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:37:–** ಅಧ್ಯಕ್ಷರು ಅಪ್ಪಣೆ ಮೇರೆಗೆ ಸಭೆ ವೇಳೆಯಲ್ಲಿ ಬರಬಹುದಾದ ಇತರೆ ಜರೂರಾತಿ ವಿಷಯಗಳು.

**ವಿಷಯ:37(1):–** ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಛೇರಿರವರ ಪತ್ರ ಸಂಖ್ಯೆ:ಕೆಎಸ್‌ಪಿಸಿಬಿ/ಆರ್‌ಒಎಂಎನ್‌ಡಿ/ಇಒ/ಡಿಇಒ/ಎಇಒ/ಸಿಎಂಸಿ/ಡಬ್ಲ್ಯುಪಿಸಿ/ಐಎನ್‌ಆರ್/ನಂ.117496/06–07 ದಿನಾಂಕ:21–11–2006ರಂತೆ ಬಂದಿರುವ ಪತ್ರದಂತೆ ಮಂಡ್ಯ ನಗರಸಭೆಯಿಂದ ಸುಸಜ್ಜಿತವಾದ ಕಸಾಯಿಖಾನೆಯನ್ನು (ಸ್ಲಾಟರ್ ಹೌಸ್) ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ನಿಯಮಗಳ ಪ್ರಕಾರ ಊರಿನ ಹೊರಗೆ ಕಟ್ಟಬೇಕಾಗಿರುವುದರಿಂದ ಸದರಿ ವಿಷಯದ ಬಗ್ಗೆ ನಗರಸಭೆಯಿಂದ ನಿವೇಶನ ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(1):** ಹೆಬ್ಬಳ್ಳದ ಹತ್ತಿರ ಕಸಾಯಿ ಖಾನೆಗೆ ಸೂಕ್ತ ಸ್ಥಳಾವಕಾಶವಿರುವುದರಿಂದ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಭಿಯಂತರರೊಂದಿಗೆ ಸ್ಥಳ ಪರಿಶೀಲಿಸಿ ಸದರಿ ಪ್ರದೇಶದಲ್ಲಿ ಕಸಾಯಿಖಾನೆ ನಿರ್ಮಿಸಲು ಗುರುತಿಸಿಕೊಳ್ಳಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:37(2):**–ವಾರ್ಡ್ ನಂಬರ್ 34ರಲ್ಲಿ "ಚಿಕ್ಕೇಗೌಡ ಬಡಾವಣೆ" ಎಂದು 2 ಸಂಖ್ಯೆ ಆರ್ಚ್ ನಾಮಫಲಕಗಳನ್ನು ಅಂದಾಜು ವೆಚ್ಚ 60,000 * 2 =1,20,000/–ರೂ.ಗಳಲ್ಲಿ ಹಾಕಿಸುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮತಿ.ನಿರ್ಮಲ ಚಿಕ್ಕೇಗೌಡರವರು ಮನವಿ ಸಲ್ಲಿಸಿ ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(2):–** ವಿಷಯ 23ರ ತೀರ್ಮಾನದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ 37(3):– ಮಾನ್ಯ ಸದಸ್ಯರಾದ ಶ್ರೀ.ಬಿ.ಎಂ.ಬಾಷರವರಿಂದ ಬಂದಿರುವ ವಿಷಯಗಳು:**

**ವಿಷಯ:37(3)(1):–** ವಾರ್ಡ್ ನಂಬರ್ 31ರಲ್ಲಿ "ಮಾರುತಿ ಬಡಾವಣೆ" ಎಂದು ಆರ್ಚ್ ನಾಮಫಲಕವನ್ನು ಅಂದಾಜು ವೆಚ್ಚ 60,000/–ರೂ.ಗಳಲ್ಲಿ ಹಾಕಿಸುವ ಬಗ್ಗೆ ಮನವಿ ಸಲ್ಲಿಸಿ ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(3)(1):–** ವಿಷಯ 23ರ ತೀರ್ಮಾನದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:37(3):(2):–** ವಾರ್ಡ್ ನಂಬರ್:31, 2ನೇ ಕ್ರಾಸ್ ರಸ್ತೆಗೆ ನೀರು ಸರಬರಾಜು ಪೈಪ್ ಲೈನ್ ಹಾಕಿಸುವ ಕಾಮಗಾರಿ ಅಂದಾಜು ವೆಚ್ಚ 36,000/–ರೂ.ಗಳಲ್ಲಿ ಮಾಡಿಸಿಕೊಡಲು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(3)(2):–** ಒಪ್ಪಲಾಯಿತು

**ವಿಷಯ:37(3)(3):–** (3)ವಾರ್ಡ್ ನಂಬರ್:31, ವೀರಶೈವ ಹಾಸ್ಟೆಲ್ ಹಿಂಭಾಗದ ಬಡಾವಣೆಯ ಎರಡು ರಸ್ತೆಗಳಿಗೆ ಜಲ್ಲಿ ಬಿಚಾವಣೆ ಕಾಮಗಾರಿ ಮಾಡಿಸಲು ಈ ಹಿಂದೆ ಕೌನ್ಸಿಲ್ ನಿರ್ಣಯ ಸಂಖ್ಯೆ:725 ದಿನಾಂಕ:14–8–2000ದಂತೆ ಮಂಜೂರಾಗಿದ್ದು ಸದರಿ ಕಾಮಗಾರಿ ಮಾಡಿರುವುದಿಲ್ಲವಾದ್ದರಿಂದ ಸದರಿ ಕಾಮಗಾರಿ

ಬದಲಿಗೆ "ಮಾರುತಿ ಬಡಾವಣೆ 5ನೇ ಕ್ರಾಸ್ ರಸ್ತೆಯಲ್ಲಿ ಜಲ್ಲಿ ಬಿಚಾವಣೆ ಕಾಮಗಾರಿ ಅಂದಾಜು ವೆಚ್ಚ 1.40ಲಕ್ಷ ರೂ.ಗಳ "ಬದಲಿ ಕಾಮಗಾರಿ ಮಾಡಿಸಲು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:(370(3)(3):–**ಬದಲಿ ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದಂತೆ ನಗರಸಭಾಧ್ಯಕ್ಷರಿಗೆ ಅಧಿಕಾರ ನೀಡಿರುವುದರಿಂದ ಪರಿಶೀಲಿಸಿ ಕ್ರಮ ಕೈಗೊಳ್ಳವುದೆಂದು ತೀರ್ಮಾನಿಸಲಾಯಿತು.

**ವಿಷಯ37(4):–** ಮಾನ್ಯ ಸದಸ್ಯರಾದ ಶ್ರೀಮತಿ.ಭದ್ರಮ್ಮರವರು ಮನವಿ ಸಲ್ಲಿಸಿ ಕಾಳಿಕಾಂಬ ರಸ್ತೆಗೆ ಬಾಕ್ಸ್ ಟೈಪ್ ಡ್ರೈನೇಜ್ ಕಾಮಗಾರಿಗೆ ಮಂಜೂರಾಗಿದ್ದು ಅದಕ್ಕೆ ಬದಲಾಗಿ ನೀರು ಸರಬರಾಜು ಪೈಪ್ ಲೈನ್ ಹಾಕಲು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(4):–** ಬದಲಿ ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದಂತೆ ನಗರಸಭಾಧ್ಯಕ್ಷರಿಗೆ ಅಧಿಕಾರ ನೀಡಿರುವುದರಿಂದ ಪರಿಶೀಲಿಸಿ ಕ್ರಮ ಕೈಗೊಳ್ಳವುದೆಂದು ತೀರ್ಮಾನಿಸಲಾಯಿತು.

**ವಿಷಯ:38(5):–** ಮಾನ್ಯ ಸದಸ್ಯರಾದ ಶ್ರೀಮತಿ.ಈರಮ್ಮರವರು ಮನವಿ ಸಲ್ಲಿಸಿ ವಾರ್ಡ್ ನಂಬರ್ 8ರಲ್ಲಿ ಕೆ.ಮರೀಗೌಡ ಬಡಾವಣೆಗೆ ಆರ್ಚ್ ನಾಮಫಲಕ ಹಾಕಿಸಿಕೊಡಲು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(5):–** ವಿಷಯ 23ರ ತೀರ್ಮಾನದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:37(6):–**ಮಾನ್ಯ ಸದಸ್ಯರಾದ ಶ್ರೀ.ಎಂ.ಸಿ.ರಾಘವೇಂದ್ರ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಾಲಹಳ್ಳಿ, ನೆಹರುನಗರ, ಮಂಡ್ಯ ಶಾಲೆಗೆ ಅಡುಗೆ ಕಟ್ಟಡ ನಿರ್ಮಾಣಕ್ಕೆ ಇಲಾಖೆಯಿಂದ ಹಣ ಬಿಡುಗಡೆಯಾಗಿದ್ದು, ಸದರಿ ಮೊತ್ತ ಅಡುಗೆ ಮನೆ ಕಟ್ಟಡ ನಿರ್ಮಾಣಕ್ಕೆ ಸಾಕಾಗದೇ ಇರುವುದರಿಂದ ನಗರಸಭೆ ವತಿಯಿಂದ 50,000/– ರೂ.ಗಳನ್ನು ಮಂಜೂರು ಮಾಡಿಕೊಡುವಂತೆ ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:37(6):-** ವಿಷಯ ಸಂಖ್ಯೆ:20ರ ನಿರ್ಣಯದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:37(7):–** ಮಾನ್ಯ ಸದಸ್ಯರಾದ ಶ್ರೀಮತಿ.ಜೀನತ್ ಸಯೀದ್ ರವರು ಮನವಿ ಸಲ್ಲಿಸಿ ಹಾಲಹಳ್ಳಿ ಮುಸ್ಲಿಂ ಬ್ಲಾಕ್ 8ನೇ ಕ್ರಾಸ್ ಮುಖ್ಯ ವೃತ್ತದಲ್ಲಿ "ನೂರಾನಿ ಮೊಹಲ್ಲ" ಎಂಬುದಾಗಿ ಆರ್ಚ್ ನಾಮಫಲಕ ಹಾಕಿಸಿಕೊಡಲು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(7):–** ವಿಷಯ 23ರ ತೀರ್ಮಾನದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:37(8):–** ಮಾನ್ಯ ಜಿಲ್ಲಾಧಿಕಾರಿಯವರ ನ್ಯಾಯಾಲಯ ಪ್ರಕರಣ ಸಂಖ್ಯೆ:ಎಂ.ಎ.14/2004 ರಂತೆ ಶ್ರೀಮತಿ.ಎಂ.ಜೆ.ಮೇರಿ ಕೋಂ.ಚೆಲುವರಾಜು ವಿಶ್ವೇಶ್ವರಪುರಂ ಬಡಾವಣೆ, ಮಂಡ್ಯರವರ ಖಾತಾ ನಂಬರ್ ಡಿ7/1953/10504/ಜಿ 4248ರ ಖಾತೆಯನ್ನು ದಿನಾಂಕ:22–12–2000 ವಿಷಯ 43ರ ತೀರ್ಮಾನದಂತೆ ಸದರಿ ಖಾತೆಯನ್ನು ರದ್ದುಗೊಳಿಸಿದ್ದು ಈಗ ಸದರಿ ಖಾತೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಆದೇಶದಂತೆ ಮುಂದುವರಿಸುವ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(8):–** ಕಾನೂನು ಅನುಸರಿಸಿ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ:37(9):–** ಮಂಡ್ಯ ತಾಲ್ಲೂಕು ತಹಸೀಲ್ದಾರ್ ರವರ ಪತ್ರದ ಸಂಖ್ಯೆ:ಎಂಎಸ್‌ಸಿ(2) ಸಿಆರ್ 112/2006–07 ದಿನಾಂಕ:25–11–2006ರಂತೆ ಶ್ರೀಮತಿ.ಪಾರ್ವತಮ್ಮ ಕೋಂ.ಲೇಟ್.ಟಿ.ಎಸ್.ಶಿವರುದ್ರಯ್ಯರವರು ಉಪನೋಂದಣಾಧಿಕಾರಿಗಳ ಕಚೇರಿಯ ಪಕ್ಕದಲ್ಲಿ ತಂಪು ಪಾನೀಯ ಮತ್ತು ಜೆರಾಕ್ಸ್ ಅಂಗಡಿ ಇಡಲು ಅನುಮತಿ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(9):–** ಕಾನೂನು ಅನುಸರಿಸಿ ಅನುಮತಿ ನೀಡಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:37(10):–** ಸ್ವರ್ಣಸಂದ್ರ ರಂಗಮಂದಿರಕ್ಕೆ ಮುಂಭಾಗದ ಗೇಟನ್ನು ಅಳವಡಿಸುವ ಕಾಮಗಾರಿ ಬಾಬ್ತು ಅಂದಾಜು ವೆಚ್ಚ ರೂ.50,000/–ಗಳಿಗೆ ಒಪ್ಪಿ ಮಂಜೂರು ಮಾಡುವ ವಿಚಾರ.

**ತೀರ್ಮಾನ:37(10):–** ಒಪ್ಪಲಾಯಿತು.

**ವಿಷಯ:37(11):–** ಮಾನ್ಯ ಸದಸ್ಯರಾದ ಶ್ರೀ.ಎಂ.ಮಹದೇವು (ಕಿಟ್ಟಿ)ರವರಿಂದ ಬಂದಿರುವ ವಿಷಯ. ವಾರ್ಡ್ ನಂಬರ್:1ರಲ್ಲಿ ಕಾಮಗಾರಿಗಳ ಬಾಬ್ತು ಖರ್ಚಾಗದೇ ಬಾಕಿ ಉಳಿದಿರುವ ಮೊತ್ತ ರೂ.2,55,000/– ಗಳ ವೆಚ್ಚದಲ್ಲಿ ಬದಲಿ ಕಾಮಗಾರಿ ಬಾಬ್ತು ಬೋರ್‌ವೆಲ್ ಕೊರೆಸಿ ಮೋಟಾರ್ ಅಳವಡಿಸಿ ಕಿರು ನೀರು ಸರಬರಾಜು ವ್ಯವಸ್ಥೆ ಮಾಡಿಸಿಕೊಡುವಂತೆ ಕೋರಲಾಗಿದ್ದು ಈ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(11):–** ಬದಲಿ ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದಂತೆ ನಗರಸಭಾಧ್ಯಕ್ಷರಿಗೆ ಅಧಿಕಾರ ನೀಡಿರುವುದರಿಂದ ಪರಿಶೀಲಿಸಿ ಕ್ರಮ ಕೈಗೊಳ್ಳವುದೆಂದು ತೀರ್ಮಾನಿಸಲಾಯಿತು.

**ವಿಷಯ:37(12):–** ಮಾನ್ಯ ಸದಸ್ಯರಾದ ಶ್ರೀಮತಿ.ಎಂ.ಗೀತಾ ರಾಮಕೃಷ್ಣರವರಿಂದ ಬಂದಿರುವ ವಿಷಯ. ನಗರಸಭಾ ವತಿಯಿಂದ ಪ್ರತೀ ವಾರ್ಡ್‌ಗೆ ರೂ.1.60ಲಕ್ಷ ಗಳ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು ರಸ್ತೆ ಅಭಿವೃದ್ಧಿ ಕಾಮಗಾರಿ ಬದಲಿಗೆ ವಾರ್ಡ್ ನಂಬರ್:2ರಲ್ಲಿ ಪೈಪ್ ಲೈನ್ ಕಾಮಗಾರಿಯನ್ನು ಮಾಡಿಸಿಕೊಡುವಂತೆ ಕೋರಿರುವ ವಿಚಾರ.

**ತೀರ್ಮಾನ:37(12):–** ವಿಷಯ ಸಂಖ್ಯೆ:20ರ ನಿರ್ಣಯದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:37(13):–** ಬಂದೀಗೌಡ ಬಡಾವಣೆ ರೈಲ್ವೆ ಲೈನ್ ಪಕ್ಕ (ವಾಟರ್ ಟ್ಯಾಂಕ್) ಇರುವ ನಗರಸಭಾ ನಿವೇಶನದಲ್ಲಿ ನಗರಸಭಾ ಅಭಿಯಂತರರುಗಳಿಗೆ ವಸತಿ ಗೃಹಗಳನ್ನು ನಿರ್ಮಾಣ ಮಾಡುವ ಬಗ್ಗೆ.

**ತೀರ್ಮಾನ:37(13)–** ಕಛೇರಿಯ ಅಭಿಯಂತರರಿಗೆ ಮಾತ್ರವಲ್ಲದೆ ಅಗತ್ಯವಿರುವ ನಗರಸಭೆಯ ಇತರೆ ನೌಕರಿಗೂ ಸಹ ವಸತಿ ಗೃಹಗಳನ್ನು ನಿರ್ಮಾಣ ಮಾಡಿಸಬಹುದೆಂದು ಒಪ್ಪಲಾಯಿತು.

**ವಿಷಯ::37(14):–** ಮಂಡ್ಯ ನಗರಸಭೆ ವ್ಯಾಪ್ತಿಯೊಳಗೆ ಆಯ್ದ ಭಾಗಗಳಲ್ಲಿ ರಸ್ತೆ ಕಟಿಂಗ್‌ಗಳಿಗೆ ಡಾಂಬರೀಕರಣ ಮಾಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(14):–** ಅಂದಾಜು ವೆಚ್ಚ ರೂ.2.50ಲಕ್ಷಗಳಲ್ಲಿ ಡಾಂಬರೀಕರಣ ಮಾಡಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:37(15):–** ಮಂಡ್ಯ ನಗರಸಭೆಯ ಶ್ರೀ ಧರಣಪ್ಪ ಸಭಾಂಗಣದಲ್ಲಿ ಅಳವಡಿಸಿರುವ ಕುರ್ಚಿಗಳ ಕುಷನ್‌ಗಳು ಹಾಳಾಗಿರುವುದರಿಂದ ಅವುಗಳನ್ನು ದುರಸ್ತಿ ಮಾಡಿಸಲು ಟೆಂಡರ್ ಕರೆಯುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(15):–** ನಿಯಮಾನುಸಾರ ಕ್ರಮ ವಹಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:37(16):–** ನಗರಸಭೆ ಸಾಮಾನ್ಯ ಅಧಿವೇಶನ ಸಂಖ್ಯೆ: 1 ದಿನಾಂಕ:28–03–2006 ರಲ್ಲಿ ವಾರ್ಡ್‌ವಾರು 5 ಸಂಖ್ಯೆ ಸೋಡಿಯಂ ಮತ್ತು 3 ಸಂಖ್ಯೆ: ಟ್ಯೂಬ್ ಲೈಟ್ ಫಿಟಿಂಗ್‌ಗಳನ್ನು ಖರೀದಿಸಲು ತೀರ್ಮಾನಿಸಿರುವುದನ್ನು ಮಾರ್ಪಾಡು ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(16):** ಪರಿಶೀಲಿಸಲಾಗಿ ಸೋಡಿಯಂ ಮತ್ತು ಟ್ಯೂಬ್ ಲೈಟ್‌ಗಳ ಬದಲಾಗಿ ಮೆಟಲ್ ಅಲಾಯ್ಡ್ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸಬಹುದೆಂದು ಮಾನ್ಯ ಸದಸ್ಯರಾದ ಶ್ರೀ.ಬಿ.ಎಂ.ಬಾಷರವರು ಸೂಚಿಸಿದರು. ಸದರಿಯವರ ಸೂಚನೆಯನ್ನು ಸಭೆಯು ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:37(17):–** ವಾರ್ಡ್ ನಂಬರ್:34ರ ಚಿಕ್ಕೇಗೌಡನದೊಡ್ಡಿ 1ನೇ ಮುಖ್ಯ ರಸ್ತೆ ಎಡಭಾಗ ಎರಡನೇ ಕ್ರಾಸ್‌ನಲ್ಲಿ ರಸ್ತೆ ನಿರ್ಮಾಣ ಮಾಡಲು ತೊಂದರೆಯಾಗಿದ್ದು ಶ್ರೀ.ಸಿ.ಕೆ.ನಾಗರಾಜು ಬಿನ್ ಕೆಂಪೇಗೌಡರವರಿಗೆ ಸೇರಿದ ಸರ್ವೆ ನಂಬರ್:513/6ರ ಬಾಬ್ತು 12*70ಅಡಿ ಶ್ರೀ.ಚಾಮುಂಡೇಗೌಡರ ಬಾಬ್ತು ಸರ್ವೆ ನಂಬರ್:513ರಲ್ಲಿ 6*70ಅಡಿ ಹಾಗೂ ಅವರ ಜಾಗದಲ್ಲಿರುವ ಶೌಚಾಲಯ ಹಾಗೂ ಬಾವಿ ಸೇರಿ ಒಟ್ಟು ಎರಡು ಲಕ್ಷ ರೂ.ಗಳ ಪರಿಹಾರ ನೀಡಿ ನಂತರ ಸದರಿ ಜಾಗವನ್ನು ನಗರಸಭೆಗೆ ಬಿಟ್ಟುಕೊಡಲು ಬದ್ಧರಾಗಿರುವುದಾಗಿ ಮಾನ್ಯ ಶಾಸಕರು ಹಾಗೂ ಸದಸ್ಯರುಗಳ ಸಮ್ಮುಖದಲ್ಲಿ ಎರಡು ಲಕ್ಷ ರೂ.ಗಳ ಪರಿಹಾರ ನೀಡುವ ಬಗ್ಗೆ ಒಪ್ಪಿರುವುದರಿಂದ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:37(17):–** ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಈ ಸಂಬಂಧ ಈಗಾಗಲೇ ಸದರಿ ಕಡತವು ಭೂಸ್ವಾಧೀನ ಕಛೇರಿಯಲ್ಲಿ ಪತ್ರ ವ್ಯವಹಾರ ನಡೆಯುತ್ತಿದ್ದು ಪರಿಹಾರ ನೀಡಿ ರಸ್ತೆಗೆ ಭೂಸ್ವಾಧೀನಪಡಿಸುವ ಸಂಬಂಧ ವಿಳಂಭವಾಗಿರುವುದರಿಂದ ಸದರಿ ಕಛೇರಿಗೆ ಪಾವತಿಸಿರುವ ಅವಾರ್ಡ್ ಮೊಬಲಗನ್ನು ವಾಪಸ್ಸು ಪಡೆದು ಸಂಧಾನದಂತೆ ಸದರಿಯವರಿಗೆ ತುರ್ತಾಗಿ ಪರಿಹಾರ ಹಣ ಪಾವತಿಸುವ ಸದರಿಯವರಿಗೆ ಪರಿಹಾರ ಹಣ ಪಾವತಿಸಿ ಸದರಿ ಜಾಗವನ್ನು ನಗರಸಭೆ ಸ್ವಾಧೀನಕ್ಕೆ ಪಡೆದು ರಸ್ತೆ ನಿರ್ಮಾಣ ಮಾಡಬಹುದೆಂದು ತೀರ್ಮಾನಿಸಲಾಯಿತು.

**ಸಹಿ:**
**(ಸಿ.ವಿಜಯಲಕ್ಷ್ಮಿ ರಘುನಂದನ್)**
**ಅಧ್ಯಕ್ಷರು,**
**ನಗರಸಭೆ, ಮಂಡ್ಯ.**

**"ನಕಲು"**
**ಸಹಿ:**
**ಪೌರಾಯುಕ್ತರು,**
**ನಗರಸಭೆ, ಮಂಡ್ಯ**